ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಮಾರ್ಚ್ 2020

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-20 ಸಂಚಿಕೆ-03 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಕುಂಭಾಭಿಷೇಕ

### “ಭಗವದನುಗ್ರಹಕ್ಕಾಗಿ ಶ್ರೀ ದೇವರನ್ನು ಪ್ರಾರ್ಥಿಸಿ” – ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳು



ಶ್ರೀಶ್ರೀಗಳವರ ಅನುಗ್ರಹ ಭಾಷಣಕ್ಕೆ ನೆರೆದ ಭಕ್ತಾಧಿಗಳು



ಅಲಂಕೃತ ಶ್ರೀ ಶಾರದೆ



ಶ್ರೀಶ್ರೀಗಳವರಿಗೆ ಭಿನ್ನವತ್ತಳೆ ಸಮರ್ಪಣೆ

"ಅಹಿಂಸೆ, ಸತ್ಯ, ಅಸ್ತೇಯ, ಶೌಚ, ಇಂದ್ರೀಯನುಗ್ರಹಗಳು ಸಾಮಾನ್ಯ ಧರ್ಮ. ಇವುಗಳನ್ನು ಎಲ್ಲರೂ ಪಾಲಿಸಲೇಬೇಕು. ಬ್ರಹ್ಮಚಾರಿ, ಗ್ರಹಸ್ಥ ಹಾಗೂ ಸನ್ಯಾಸಿಗಳಿಗೆ ಪ್ರತ್ಯೇಕ ನಿಯಮಗಳಿದ್ದು ಇವು ವಿಶೇಷ ಧರ್ಮ ಎಂದು ಹೇಳಲ್ಪಡುತ್ತವೆ. ಅದಾಗ್ಯೂ, ಈ ಧರ್ಮ ಪರಿಪಾಲನೆಯನ್ನು ನಿಯಮದಂತೆ ಮಾಡುತ್ತಾ ಶ್ರೀ ದೇವರಲ್ಲಿ ಸಣ್ಣತನದ ಪ್ರಾರ್ಥನೆ ಸಲ್ಲಿಸದೆ ಸೂಕ್ತವಾದುದನ್ನೇ ಪ್ರಾರ್ಥಿಸಿಕೊಂಡರೆ ಸಮಯ ಬಂದಾಗ ಭಗವದನುಗ್ರಹ ಖಂಡಿತಾ ಸಿಗುತ್ತದೆ" ಎಂದು ಶೃಂಗೇರಿ ಶ್ರೀ ಶಾರದಾ ಪೀಠದ ಕಿರಿಯ ಯತಿಗಳಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀಜಿಗಳು ಹೇಳಿದರು. ಅವರು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಾರದಾ ಮಾತೆಗೆ ದಿನಾಂಕ 06.03.2020 ರಂದು ಬೆಳಿಗ್ಗೆ ಕುಂಭಾಭಿಷೇಕ ನೆರವೇರಿಸಿದ ನಂತರ ನಡೆದ ಸಭಾ ಸಮಾರಂಭದಲ್ಲಿ ಕಿಕ್ಕಿರಿದು ಸೇರಿದ ಜನಸ್ತೋಮವನ್ನು ಉದ್ದೇಶಿಸಿ ಆಶೀರ್ವಚನದ ಮಾತುಗಳನ್ನಾಡುತ್ತಾ ಹೀಗೆ ನುಡಿದರು. "ಹಿಂದೆ ಸನಾತನ ಧರ್ಮ ಶಿಥಿಲಗೊಂಡ ಸಂದರ್ಭದಲ್ಲಿ ಜಗದ್ಗುರು ಶ್ರೀ ಶ್ರೀ ಶಂಕರರು ಜನ್ಮ ತಾಳಿ, ಅತ್ಯಂತ ಕಿರಿಯ ವಯಸ್ಸಿನಲ್ಲಿ ಪ್ರಖಾಂಡ ಪಾಂಡಿತ್ಯವನ್ನು ಪಡೆದು ನಾಸ್ತಿಕರ ಜೊತೆ ವಾದ ಮಾಡಿ ಗೆದ್ದು ಸೂಕ್ತ ಮಾರ್ಗ ತೋರಿದರು. ಅವರ ರಚನೆಗಳಲ್ಲಿ ಅಧ್ಯಯನ ಶೀಲರಾದವರಿಗೂ ಹಾಗೂ ಹೆಚ್ಚು ತಿಳುವಳಿಕೆ ಪಡೆಯಬೇಕೆಂದು ಬಯಸುವ ಪಂಡಿತರಿಗೂ ಸಾಕಷ್ಟು ಸಂದೇಶಗಳನ್ನು ನೀಡಿದ್ದಾರೆ. ಇಂದಿಗೂ ಅವು ನಮಗೆಲ್ಲಾ ದಾರಿ ದೀವಿಗೆಗಳಾಗಿವೆ ಎಂದು ಕೊಂಡಾಡಿದರು".

**ಶ್ರೀಶ್ರೀಗಳಿಗೆ ಭಿನ್ನವತ್ತಳೆ ಅರ್ಪಣೆ :**

ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು ಇದರ ವತಿಯಿಂದ ಉಡುಪಿಗೆ ಪ್ರಥಮ ಬಾರಿ ಆಗಮಿಸುತ್ತಿರುವ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರಿಗೆ ಭಿನ್ನವತ್ತಳೆಯನ್ನು ಅರ್ಪಿಸಲಾಯಿತು. ವೇದಮೂರ್ತಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರು ಭಿನ್ನವತ್ತಳೆಯನ್ನು ವಾಚಿಸಿದರು. ಸಂಘದ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್, ಕೋಶಾಧಿಕಾರಿ ಶ್ರೀ ಜಯರಾಮ ರಾವ್, ಮಾಜಿ ಅಧ್ಯಕ್ಷರಾದ ಶ್ರೀ ಪಾಲಚಂದ್ರ ರಾವ್, ಶ್ರೀ ಪ್ರಫುಲ್ಲಚಂದ್ರ ರಾವ್, ಉಪಾಧ್ಯಕ್ಷ ಶ್ರೀ ಕೃಷ್ಣಮೂರ್ತಿ ಅಂಬಲ್ಪಾಡಿ ಮೊದಲಾದವರು ಭಿನ್ನವತ್ತಳೆಯನ್ನು ವಸ್ತ್ರ ಸಮರ್ಪಣೆ ಹಾಗೂ ಸಮಷ್ಠಿ ಭಿಕ್ಷೆಯೊಂದಿಗೆ ಶ್ರೀಶ್ರೀಗಳವರಿಗೆ ಜೊತೆಯಾಗಿ ಅರ್ಪಿಸಿದರು. ಶೃಂಗೇರಿ ಶ್ರೀಮಠದ ಆಡಳಿತಾಧಿಕಾರಿ ಪದ್ಮಶ್ರೀ ವಿ.ಆರ್ ಗೌರೀಶಂಕರ್ ಅವರು ಉಪಸ್ಥಿತರಿದ್ದು ಅವರನ್ನು ಶಾಲು, ಸ್ಮರಣಿಕೆ ನೀಡಿ ಗೌರವಿಸಲಾಯಿತು. (2ನೇ ಪುಟಕ್ಕೆ...)

## ಶ್ರೀ ಕ್ಷೇತ್ರ ಶೃಂಗೇರಿ ಶ್ರೀಮಠದ ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿಯಾಗಿ ಶ್ರೀ ಪಾವಂಜೆ ಎಸ್. ವಾಗೀಶ ಶಾಸ್ತ್ರಿ



ಸ್ಥಾನಿಕ ಸಮಾಜದ ಮೇರು ವ್ಯಕಿತ್ವದ ಸಜ್ಜನರಾದ, ಸಾತ್ವಿಕರಾದ ಹಾಗೂ ಹಲವು ದೇವಸ್ಥಾನಗಳ ಪ್ರಧಾನ ತಂತ್ರಿಗಳಾಗಿರುವ ಶ್ರೀ ಎಸ್.ವಾಗೀಶ ಶಾಸ್ತ್ರಿಯವರು ಶೃಂಗೇರಿ ಶ್ರೀಮಠದ ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿಗಳಾಗಿ ನಿಯುಕ್ತಿಗೊಂಡಿದ್ದಾರೆ. ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳು ತಮ್ಮ ಉಡುಪಿ ಭೇಟಿಯ ಸಂದರ್ಭದಲ್ಲಿ ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನಡೆದ ಆಶೀರ್ವಚನ ಕಾರ್ಯಕ್ರಮದಲ್ಲಿ ತಮ್ಮ ಗುರು ಶ್ರೀ ಶಾರದಾ ಪೀಠಾಧೀಶ್ವರರಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಆದೇಶದಂತೆ ಈ ವಿಚಾರವನ್ನು ಘೋಷಣೆ ಮಾಡಿದರು.

(2ನೇ ಪುಟಕ್ಕೆ...)

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ)

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-2.**



ಪ್ರಿಯರೇ,

ಸ್ವಸ್ತಿ ಶ್ರೀ ಶಾರ್ವರಿ ನಾಮ ಸಂ।ರದ
ಚೈತ್ರ ಶುಕ್ಲ 1ಯು ತಾ.25-03-2020ನೇ ಬುಧವಾರದಿಂದ
ಚೈತ್ರ ಶುಕ್ಲ 9ಯು ತಾ.02-04-2020ನೇ ಗುರುವಾರ ರಾಮನವಮಿಯ ತನಕ

**ಕಿರುನವರಾತ್ರಿ ಉತ್ಸವವು**

ಶ್ರೀ ಶಾರದಾ ದೇವಸ್ಥಾನದಲ್ಲಿ ಜರಗಲಿರುವುದು.
ಈ ಪ್ರಯುಕ್ತ ಪ್ರತಿದಿನ ಸಂಜೆ ದೇವಿಗೆ ವಿಶೇಷ ಪೂಜೆ ನೆರವೇರಲಿದೆ.



ಶ್ರೀ ಶಾರದಾ ದೇವಸ್ಥಾನದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆಯು**

ತಾ.28-04-2020ನೇ ಮಂಗಳವಾರ ನೆರವೇರಲಿದೆ.

**ಕಾರ್ಯಕ್ರಮಗಳ ವಿವರ :** ಬೆಳಿಗ್ಗೆ 8-00 ಗಂಟೆಗೆ ಪ್ರಾರ್ಥನೆ, ರುದ್ರಾಭಿಷೇಕ, ಪಾರಾಯಣ, ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ, ಬೆಳಿಗ್ಗೆ 11 ಗಂಟೆಗೆ ಉಪನ್ಯಾಸ ಕಾರ್ಯಕ್ರಮ ಮತ್ತು ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ.

**ಸಾಮೂಹಿಕ ಉಪನಯನ**

ಈ ವರ್ಷ **ಸಾಮೂಹಿಕ ಉಪನಯನ**ವು ಅಕ್ಷಯ ತದಿಗೆಯ ಶುಭ ದಿನವಾದ ತಾ.26-04-2020ರ ರವಿವಾರದಂದು ನಡೆಯಲಿದ್ದು ತಮ್ಮ ವಟುಗಳಿಗೆ ಉಪನಯನ ಸಂಸ್ಕಾರ ನಡೆಸುವರೇ ನೋಂದಾಯಿಸಲು ತಾ.20-04-2020 ಕೊನೆಯ ದಿನವಾಗಿರುತ್ತದೆ. ಆಸಕ್ತರು ಸಂಘದ ಕಛೇರಿಯನ್ನು 0820-2520754ನಲ್ಲಿ ಸಂಪರ್ಕಿಸಬೇಕಾಗಿ ಕೋರುತ್ತೇವೆ.

-ಆಡಳಿತ ಮಂಡಳಿ

# ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಕುಂಭಾಭಿಷೇಕ

...1ನೇ ಪುಟದಿಂದ

ಇದೇ ಸಂದರ್ಭದಲ್ಲಿ ಶ್ರೀಶ್ರೀಗಳವರು ಶ್ರೀಕ್ಷೇತ್ರ ಶೃಂಗೇರಿಯ ಉಡುಪಿ ಪ್ರಾಂತ್ಯಕ್ಕೆ ಧರ್ಮಾಧಿಕಾರಿಯಾಗಿ ವೇದಮೂರ್ತಿ ಬ್ರಹ್ಮಶ್ರೀ ಪಾವಂಜೆ ಎಸ್.ವಾಗೀಶ ಶಾಸ್ತ್ರಿಯವರನ್ನು ನಿಯುಕ್ತಿಗೊಳಿಸಿರುವುದಾಗಿ ಪ್ರಕಟಿಸಿದರು. ಅವರಿಗೆ ಶ್ರೀಮಠದ ವತಿಯಿಂದ ಈ ಬಗ್ಗೆ ಸನದು ಗೌರವವನ್ನು ಸಲ್ಲಿಸಲಾಯಿತು.

ಈ ಸಭೆಯ ಆರಂಭದಲ್ಲಿ ಸಂಘದ ಉಪಾಧ್ಯಕ್ಷ ಡಾ। ವೈ ಸುದರ್ಶನ್ ರಾವ್ ಸ್ವಾಗತಿಸಿದರು. ಮಾಜಿ ಅಧ್ಯಕ್ಷರಾದ ಸಿ.ಎಸ್. ರಾವ್ ವಂದನಾರ್ಪಣೆ ಮಾಡಿದರು. ಮಟ್ಟು ಕೃಷ್ಣಕುಮಾರ್ ರಾವ್ ಕಾರ್ಯಕ್ರಮ ಸಂಯೋಜನೆ ಮಾಡಿದರು. ಕೃಷ್ಣಮೂರ್ತಿ ರಾವ್ ಬ್ರಹ್ಮಾವರ ಸಹಕಾರ ನೀಡಿದರು.

**ಶ್ರೀ ಶಾರದಾ ದೇವಸ್ಥಾನ–ಕುಂಭಾಭಿಷೇಕ :**

ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನವು 1988ರಲ್ಲಿ ದಕ್ಷಿಣಾಮ್ನಾಯ ಶೃಂಗೇರಿ ಪೀಠದ 35 ನೇ ಜಗದ್ಗುರು ಶ್ರೀ ಶ್ರೀ ಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ದಿವ್ಯ ಹಸ್ತಗಳಿಂದ ಪ್ರತಿಷ್ಠಾಪಿಸಲ್ಪಟ್ಟಿತು. ಆಗ ಚಿಕ್ಕ ಮಂದಿರವಾಗಿದ್ದ ಶ್ರೀ ಶಾರದಾ ದೇವಸ್ಥಾನವು 2004ರಲ್ಲಿ ಸುತ್ತುಪೌಳಿ ರಚನೆಗೊಂಡು ಅದರಲ್ಲಿ ಶ್ರೀ ಶಾರದಾ ಮಾತೆ, ಶ್ರೀ ಮಹಾಗಣಪತಿ ಮತ್ತು ಜಗದ್ಗುರು ಶ್ರೀ ಶಂಕರರ ವಿಗ್ರಹಗಳನ್ನು ಶ್ರೀ ಶೃಂಗೇರಿ ಪೀಠದ 36ನೇ ಯತಿಗಳಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ದಿವ್ಯ ಹಸ್ತಗಳಿಂದ ಪುನರ್‌ಪ್ರತಿಷ್ಠೆ ಹಾಗೂ ಬ್ರಹ್ಮಕುಂಭಾಭಿಷೇಕಗಳು ವಿಜೃಂಭಣೆಯಿಂದ ನೆರವೇರಿದವು. ಶ್ರೀ ಚಕ್ರದೊಂದಿಗೆ ಪೂಜಿಸಲ್ಪಡುವ ಈ ಗುಡಿಯ ಹೊರಸುತ್ತಿನಲ್ಲಿ ನಾಗದೇವರ ಗುಡಿಯೂ ಇದೆ. ಇಂತಹ ಪಾವನ ಕ್ಷೇತ್ರದ ಶ್ರೀ ಶಾರದಾಂಬೆಗೆ ಕುಂಭಾಭಿಷೇಕ ನೆರವೇರಿಸಿ ಕೊಡಬೇಕೆಂದು ಶೃಂಗೇರಿ ಜಗದ್ಗುರುಗಳೇ ಈ ಕಾರ್ಯಕ್ಕೆ ಆಗಮಿಸಬೇಕೆಂದು ಇಲ್ಲಿನ ಆಡಳಿತ



ಮಂಡಳಿ ಹಾಗೂ ಭಕ್ತರ ಬೇಡಿಕೆಯಂತೆ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ತಾ.05.03.2020ರಂದು ಉಡುಪಿಗೆ ಆಗಮಿಸಿ ತಾ.06.03.2020ರಂದು ಕುಂಭಾಭಿಷೇಕದ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದರು.

**ತಯಾರಿ–ಪ್ರಚಾರ–ನಗರಾಲಂಕಾರ :**

ಕಳೆದ ಫೆಬ್ರವರಿಯಲ್ಲಿ ಶೃಂಗೇರಿಗೆ ತೆರಳಿದ್ದ ನಮ್ಮ ಪದಾಧಿಕಾರಿಗಳಿಗೆ ಶ್ರೀಶ್ರೀಗಳು ಉಡುಪಿಗೆ ಆಗಮಿಸುವುದಾಗಿ ದಿನಾಂಕ ಗೊತ್ತುಪಡಿಸಿದರು. ಅದರಂತೆ ಉಡುಪಿಯಲ್ಲಿ ಸಿದ್ಧತೆ ನಡೆಸಲಾಯಿತು. ಆಡಳಿತ ಸಮಿತಿಯು ಎಡೆಬಿಡದೆ ನಡೆಸಿದ ಹಲವು ಸಭೆಗಳಲ್ಲಿ ಅವಶ್ಯಕವಾದ ಉಪಸಮಿತಿಗಳನ್ನು ರಚಿಸಲಾಯಿತು. ಅವರವರಿಗೆ ಜವಾಬ್ದಾರಿ ನೀಡಿ ಕೆಲಸದ ಹಂಚಿಕೆಯಾದವು. ಅದರಂತೆ ಮಾಧ್ಯಮಗಳಲ್ಲಿ ಸುದ್ದಿ ಪ್ರಸಾರವಾಯಿತು. ಆಮಂತ್ರಣ ಪತ್ರಿಕೆ ಹಾಗೂ ನಗರಾಲಂಕಾರಕ್ಕಾಗಿ ಬ್ಯಾನರ್, ಕಟೌಟು ಹಾಗೂ ತೋರಣಗಳಿಂದ ಹೆಚ್ಚಿನ ಪ್ರಚಾರ ನೀಡಲಾಯಿತು. ನಮ್ಮ ನಿರ್ದೇಶಕರು ಹಾಗೂ ಇತರ ಸಮಾಜ ಬಾಂಧವರು ತಂಡಗಳಾಗಿ ಸಮಾಜದ ಹಾಗೂ ಇತರ ಸಂಘಸಂಸ್ಥೆಗಳಿಗೆ ಸ್ವತಃ ಭೇಟಿ ನೀಡಿ ಆಮಂತ್ರಣ ವಿತರಿಸಿದರು. ಇದು ಪರಿಣಾಮ ಬೀರಿ ಆಗಮಿಸುವ ಭಕ್ತರಿಗೆ ಪ್ರಚೋದನೆ ನೀಡಿದೆ ಎಂದರೆ ತಪ್ಪಲ್ಲ.

**ಮೆರವಣಿಗೆ–ಸ್ವಾಗತ–ಧೂಳಿಪಾದಪೂಜೆ :**

ದಿನಾಂಕ 05.03.2020 ರಂದು ಸಂಜೆ 4.30ಕ್ಕೆ ಸರಿಯಾಗಿ ಉಡುಪಿ ಕಡಿಯಾಳಿಯ ಓಶ್ಯನ್‌ಪರ್ಲ್ ಹೋಟೇಲಿನ ಎದುರು ಬದಿಯಲ್ಲಿ ಶ್ರೀಶ್ರೀಗಳವರನ್ನು ಎದುರುಗೊಳ್ಳಲು ಜನಸ್ತೋಮವು ಅಲ್ಲಿ ಬೀಡು ಬಿಟ್ಟಿತು. ವಿವಿಧ ಭಜನಾ ತಂಡಗಳು, ಬ್ರಾಹ್ಮಣರಿಂದ ವೇದಘೋಷ, ಕೇರಳದ ಪಂಚವಾದ್ಯ, ಚೆಂಡೆಬಳಗ, ಕುಣಿತದ ಭಜನಾ ತಂಡ, ನಾಸಿಕ್ ಬ್ಯಾಂಡ್ ಮೊದಲಾದ ಆಕರ್ಷಕ ಕಲಾ ಪ್ರಕರಣಗಳು ವಿವಿಧ ಬಿರುದಾವಳಿಯೊಂದಿಗೆ ಶ್ರೀ ಶ್ರೀ



ಗಳು ಉಪಸ್ಥಿತರಿದ್ದ ಭವ್ಯ ಟ್ಯಾಬ್ಲೋ ನಿಧಾನವಾಗಿ ಶಾರದಾ ಮಂಟಪಕ್ಕೆ ಆಗಮಿಸಿ ಭಕ್ತರ ಕಣ್ಮನಗಳನ್ನು ರಂಜಿಸಿದವು. ನಂತರ ಶ್ರೀ ಶಾರದಾ ದೇವಾಲಯದಲ್ಲಿ ಪೂರ್ಣಕುಂಭ ಸ್ವಾಗತ ನೀಡಿ ಶ್ರೀಗಳನ್ನು ಬರಮಾಡಿಕೊಳ್ಳಲಾಯಿತು. ಶ್ರೀ ಶಾರದಾ ಮಾತೆಯ ದರ್ಶನ ಪಡೆದು ಶ್ರೀಶ್ರೀಗಳವರು ಶ್ರೀ ಶಾರದಾ ಮಂಟಪಕ್ಕೆ ಆಗಮಿಸಿ, ವಿರಾಜಮಾನರಾದ ನಂತರ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಹಾಗೂ ಶ್ರೀಮತಿ ರಜನಿ ಹೆಬ್ಬಾರ್‌ರವರಿಂದ ಫಲಪುಷ್ಪಹಾರ ಸಮರ್ಪಣೆ ಹಾಗೂ ಧೂಳಿಪಾದಪೂಜೆ ನಡೆಸಲಾಯಿತು.

**ಮೊದಲ ದಿನದ ಸಭೆ :**

ನಂತರ ನಡೆದ ಅಧಿಕೃತ ಸಮಾರಂಭದಲ್ಲಿ ಸಂಘದ ಮಾಜಿ ಅಧ್ಯಕ್ಷರಾಧ ಶ್ರೀ ವೈ. ಭುವನೇಂದ್ರ ರಾವ್ ಸ್ವಾಗತಿಸಿದರು. ವಿವಿಧ ಸ್ಥಾನಿಕ ಸಂಘಟನೆಗಳು ಮತ್ತು ಸ್ಥಾನಿಕ ಮಹಾಮಂಡಲ ಹಾಗೂ ಇತರ ಸಾಮಾಜಿಕ ಸಂಘಟನೆಗಳಿಂದಲೂ ಶ್ರೀಶ್ರೀಗಳಿಗೆ ಫಲಪುಷ್ಪ ಕಾಣಿಕೆ ಸಲ್ಲಿಕೆ ಮಾಡಲಾಯಿತು.

ನಂತರ ನಡೆದ ಗುರುಗಳ ಆಶೀರ್ವಚನದಲ್ಲಿ "ಶೃಂಗೇರಿಯ ಗುರುಗಳೇ ಬಂದು ಕುಂಭಾಭಿಷೇಕ ನೆರವೇರಿಸಿ ಕೊಡಬೇಕೆನ್ನುವುದು ಸ್ಥಾನಿಕ ಬ್ರಾಹ್ಮಣ ಸಮಾಜದ ಗುರುಭಕ್ತಿಯ ಪ್ರತೀಕ. ಕಳೆದ ಐದಾರು ವರ್ಷಗಳಿಂದ ಕೇಳಿಕೊಂಡಾಗಲೂ ಅದಕ್ಕೆ ಸೂಕ್ತ ಕಾಲ ಕೂಡಿ ಬಂದಿರಲಿಲ್ಲ. ಈಗ ಆ ಸಮಯ ಬಂದಿದೆ. ನಾಳೆಯ ದಿನ ಕುಂಭಾಭಿಷೇಕವನ್ನು ನೆರವೇರಿಸಿ ನಿಮ್ಮೆಲ್ಲರನ್ನು ಅನುಗ್ರಹಿಸಬೇಕೆಂದು ಶ್ರೀದೇವಿಯಲ್ಲಿ ಪ್ರಾರ್ಥಿಸುತ್ತೇನೆ. ಆ ಮಾತೆ ನಮ್ಮೆಲ್ಲರನ್ನು ರಕ್ಷಿಸಲಿ" ಎಂದು ನುಡಿದರು. ಸಂಘದ ನಿರ್ದೇಶಕ ಶ್ರೀ ವೇಣುಗೋಪಾಲ ರಾವ್ ಕಾರ್ಯಕ್ರಮ ಸಂಯೋಜನೆ ಮಾಡಿದರು. ಶ್ರೀ ಕೃಷ್ಣಮೂರ್ತಿ ರಾವ್ ಬ್ರಹ್ಮಾವರ ಸಹಕಾರ ನೀಡಿದರು.

**ವಿವಿಧ ಸ್ಥಾನಿಕ ಸಂಘಟನೆಗಳು ಹಾಗೂ ಜನಸ್ತೋಮ :**

ಈ ಎರಡೂ ದಿನವೂ ನಮ್ಮ ಸಂಘದ ಆಮಂತ್ರಣದಂತೆ ಶ್ರೀ ಗುರುಗಳ ಮೇಲಿನ ಗೌರವ ಹಾಗೂ ಭಕ್ತಿಯಂತೆ ನಮ್ಮ ಸಮಾಜದ ಸಂಘಟನೆಗಳು ಪಾಲ್ಗೊಂಡು ಸಹಕಾರ ನೀಡಿವೆ. ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಮಂಗಳೂರು, ಆದಿಶಂಕರ ಸ್ಥಾನಿಕ ಪರಿಷತ್ ಮೂಡುಬಿದ್ರೆ, ಪುತ್ತೂರು ಸ್ಥಾನಿಕ ಶಿವಬ್ರಾಹ್ಮಣ ಸಮಾಜ ಸೇವಾ ಸಂಘ (ರಿ), ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಬೆಳ್ತಂಗಡಿ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಪಡುಬಿದ್ರೆ, ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ ಬೆಂಗಳೂರು, ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ ಪಾವಂಜೆ, ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ, ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬಂಟ್ವಾಳ ವಿಟ್ಲ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಸುರತ್ಕಲ್ ಮೊದಲಾದ ನಮ್ಮ ಸಮಾಜದ ಸಂಘಟನೆಗಳ ವಿವಿಧ ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಂಡು ಶ್ರೀ ಶ್ರೀಗಳಿಗೆ ಪಾದ ಪೂಜೆ ಹಾಗೂ ಕಾಣಿಕೆ ಸಮರ್ಪಣೆ ಮಾಡಿದರು. ಇದಲ್ಲದೆ ಉಡುಪಿ ಹಿರಿಯ ನಾಗರಿಕರ ವೇದಿಕೆ, ಜ್ಞಾನ ಭಾರತಿ (ರಿ) ಉಡುಪಿ, ಶ್ರೀ ದುರ್ಗಾದೇವಿ ಮಹಾಕಾಳಿ ಅಮ್ಮನವರ ದೇವಸ್ಥಾನ ಕೋಡಿಬೆಂಗ್ರೆ, ಉಡುಪಿ ಜಿಲ್ಲಾ ಬ್ರಾಹ್ಮಣ ಸಭಾ (ರಿ), ಶ್ರೀ ಶಾರದಾ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ ಉಡುಪಿ, ಶ್ರೀ ರಾಮ ಕ್ಷತ್ರಿಯ ಸಂಘ ಉಡುಪಿ, ಭಂಡಾರಿ ಮಹಾಮಂಡಲ ಬಾರಕೂರು, ಶ್ರೀ ಮುದ್ದಣ ಅಧ್ಯಯನ ಕೇಂದ್ರ ನಂದಳಿಕೆ, ಶ್ರೀ ಭಗವತಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಕೆರ್ಗಾಲು ಮೊದಲಾದ ಸಂಘಟನೆಗಳ ಪದಾಧಿಕಾರಿಗಳು ಆಗಮಿಸಿ ಫಲ ಪುಷ್ಪ ಕಾಣಿಕೆ ಸಲ್ಲಿಸಿದರು. ಹೀಗೆ ಮೆರವಣಿಗೆಗೆ ಹಾಗೂ ಇತರ ಎಲ್ಲಾ ಕಾರ್ಯಕ್ರಮಗಳಿಗೆ ಅಪಾರ ಸಂಖ್ಯೆಯ ಜನಸ್ತೋಮವು ನೆರೆದಿದ್ದು ಶೃಂಗೇರಿ ಪೀಠದ ಮೇಲೆ ಇರುವ ಭಕ್ತಿ ನಿಷ್ಠೆಗೆ ಸಾಕ್ಷಿಯಾಯಿತು.

**ಶೃಂಗೇರಿಯ ವೈದಿಕ ತಂಡ :**

ಕುಂಭಾಭಿಷೇಕಕ್ಕೆ ಅನೇಕ ಧಾರ್ಮಿಕ ವಿಧಿವಿಧಾನಗಳು ನೆರವೇರಿದ್ದು ಅದಕ್ಕಾಗಿ ಫೆಬ್ರವರಿ 4ರಂದೇ ಶೃಂಗೇರಿಯ ವೇದಮೂರ್ತಿ ಶ್ರೀ ನಿರಂಜನ ಬಾಪಟ್ ನೇತೃತ್ವದ ವೈದಿಕ ತಂಡವು ಆಗಮಿಸಿ ಸಿದ್ಧತೆ ನಡೆಸಿತು. ಅಲ್ಲದೇ ಶ್ರೀ ದೇವಸ್ಥಾನದಲ್ಲಿ ಮತ್ತು ದೇವಳದ ಹೊರಭಾಗದಲ್ಲಿ ವಿವಿಧ ಹೋಮಗಳು ನೆರವೇರಿತ್ತು. ಈ ಎಲ್ಲಾ ವೈದಿಕರು ತಮ್ಮ, ತಮ್ಮ ಕೆಲಸಗಳನ್ನು ಅಚ್ಚುಕಟ್ಟಾಗಿ ನೆರವೇರಿಸಿದರು.

**ವಿವಿಧ ಸಂಘಟನೆಗಳಿಗೆ ಶ್ರೀಗಳ ಭೇಟಿ :**

ಉಡುಪಿಗೆ ಆಗಮಿಸಿದ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು



ಉಡುಪಿಯ ಆಸುಪಾಸಿನ ವಿವಿಧ ಶ್ರದ್ಧಾ ಕೇಂದ್ರಗಳಿಗೆ ಭೇಟಿ ನೀಡಿದರು. ಕಲ್ಯಾಣಪುರ ಸಂತೆಕಟ್ಟೆಯ ಶ್ರೀ ಆದಿಶಕ್ತಿ ವೀರಭದ್ರ ಬ್ರಹ್ಮಲಿಂಗೇಶ್ವರ ದೇವಸ್ಥಾನ, ಚಿಟ್ಪಾಡಿಯ ಶ್ರೀ ಶಾರದಾಂಬಾ ದೇವಸ್ಥಾನ, ಜಿಲ್ಲಾ ಮರಾಠಿ ಸಂಘ ಕುಂಜಿಬೆಟ್ಟು, ಶ್ರೀ ತುಳುಜಾ ಭವಾನಿ ಮರಾಠಿ ಭವನ, ಮೊದಲಾದವುಗಳೆಡೆ ಭೇಟಿ ನೀಡಿ ಆಶೀರ್ವಚನ ಹಾಗೂ ಮಂತ್ರಾಕ್ಷತೆ ನೀಡಿದರು.

**ಶ್ರೀ ಶಾರದಾ ಚಂದ್ರಮೌಳೀಶ್ವರ ಪೂಜೆ :**

ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರು ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ರಾತ್ರಿ ಶ್ರೀ ಶಾರದಾ ಚಂದ್ರಮೌಳೀಶ್ವರ ಪೂಜೆ ನೆರವೇರಿಸಿದರು.



ವಿವಿಧ ದ್ರವ್ಯಗಳಿಂದ ಅಭಿಷೇಕ ಹಾಗೂ ವಿವಿಧ ಹೂವಿನ ಅಲಂಕಾರ ಮತ್ತು ಅರ್ಚನೆಯೊಂದಿಗೆ ಮಹಾಮಂಗಳಾರತಿಯನ್ನು ಸ್ವತಃ ಶ್ರೀಶ್ರೀಗಳವರೇ ಅರ್ಪಿಸುತ್ತಿರುವುದನ್ನು ನೋಡಿ ಭಕ್ತರು ಭಾವುಕರಾದರು.

**ಪ್ರಸಾದ ಭೋಜನ :**

ಮೊದಲ ದಿನ ಶ್ರೀ ಶಾರದಾ ಚಂದಮೌಳೀಶ್ವರ ಪೂಜೆಯ ನಂತರ ನೆರೆದ ಎಲ್ಲಾ ಭಕ್ತರು ಪ್ರಸಾದ ಭೋಜನ ಸ್ವೀಕಾರ ಮಾಡಿ ನಿರ್ಗಮಿಸಿದರು. ಮರುದಿನ ಬೆಳಿಗ್ಗೆ ಸುಮಾರು 10 ಗಂಟೆಯವರೆಗೆ ಎಲ್ಲರಿಗೂ ಬೆಳಗ್ಗಿನ ಉಪಹಾರ ನೀಡಲಾಗಿತ್ತು ಅಲ್ಲದೇ ಮಧ್ಯಾಹ್ನ ಎಲ್ಲಾ ಕಾರ್ಯಕ್ರಮಗಳ ನಂತರ 12.30 ಕ್ಕೆ ಪ್ರಸಾದ ಭೋಜನ ನೀಡಲಾಯಿತು. ಸುಮಾರು 2500 ಮಂದಿ ಪ್ರಸಾದ ಭೋಜನ ಸ್ವೀಕರಿಸಿ ಕೃತಾರ್ಥರಾದರು.

**ಕೃತಜ್ಞತಾರ್ಪಣೆ :**

ಉಡುಪಿಗೆ ಪ್ರಪ್ರಥಮ ಬಾರಿ ಆಗಮಿಸಿದ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ಕುಂಭಾಭಿಷೇಕ ನೆರವೇರಿಸಿ ನಮ್ಮನ್ನೆಲ್ಲ ಅನುಗ್ರಹಿಸಿದ್ದಾರೆ. ಅವರಿಗೆ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘವು ಅನಂತ ನಮನಗಳೊಂದಿಗೆ ಕೃತಜ್ಞತೆ ಸಲ್ಲಿಸುತ್ತದೆ. ಹಾಗೆಯೇ ಆಗಮಿಸಿ ನಮ್ಮೊಂದಿಗೆ ಇದ್ದ ಆಡಳಿತಾಧಿಕಾರಿ ಪದ್ಮಶ್ರೀ ವಿ.ಆರ್ ಗೌರಿಶಂಕರ್, ಸಲಹೆ ನೀಡಿರುವ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ, ಎಲ್ಲಾ ವೈದಿಕ ತಂಡ ಹಾಗೂ ಸಿಬ್ಬಂದಿ ವರ್ಗದ ಎಲ್ಲರಿಗೂ ಧನ್ಯವಾದಗಳು. ನಮ್ಮ ಕರೆಗೆ ಸ್ಪಂದಿಸಿ ಆಗಮಿಸಿದ ನಮ್ಮ ಸಮಾಜದ ಎಲ್ಲಾ ಸಂಘಟನೆಗಳಿಗೆ ಬೇರೆ ಬೇರೆ ಸಾಮಾಜಿಕ ಸಂಘಟನೆಗಳಿಗೆ ಭಕ್ತಬಾಂಧವರಿಗೆ ವಂದನೆಗಳು.

ಸಹಕಾರ ನೀಡಿದ ವಾಣಿಜ್ಯ ಸಂಘಟನೆಗಳು, ವ್ಯಕ್ತಿಗಳು ಎಲ್ಲಾ ಭಕ್ತಬಾಂಧವರಿಗೆ ನಗರ ಸಭೆಯ ಅಧಿಕಾರಿ ವರ್ಗಕ್ಕೆ, ಪೋಲಿಸ್ ಇಲಾಖೆಗೆ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘವು ಕೃತಜ್ಞತೆ ಸಲ್ಲಿಸುತ್ತದೆ.

ವರದಿ : ಕೃಷ್ಣಕುಮಾರ್ ಮಟ್ಟು

## ಶ್ರೀ ಕ್ಷೇತ್ರ ಶೃಂಗೇರಿ ಶ್ರೀಮಠದ ಧರ್ಮಾಧಿಕಾರಿಯಾಗಿ ಶ್ರೀ ಎಸ್. ವಾಗೀಶ ಶಾಸ್ತ್ರಿ

■...1ನೇ ಪುಟದಿಂದ

ಅಲ್ಲದೇ ಶ್ರೀಮಠದ ಆಡಳಿತಾಧಿಕಾರಿ ಪದ್ಮಶ್ರೀ ವಿ.ಆರ್.ಗೌರಿಶಂಕರ್‌ರವರು ಶೃಂಗೇರಿ ಪೀಠದ ಸನದನ್ನು ವಾಚಿಸಿದ ನಂತರ ಶ್ರೀ ವಾಗೀಶ ಎಸ್. ಶಾಸ್ತ್ರಿಯವರಿಗೆ ಗೌರವಪೂರ್ವಕವಾಗಿ ಶಾಲು ಹೊದಿಸಿದರು. ನಂತರ ಶ್ರೀಶ್ರೀಗಳು ಅವರಿಗೆ ಶ್ರೀಮಠದ ಸನದನ್ನು ಪ್ರದಾನ ಮಾಡಿದರು.

ಶ್ರೀ ವಾಗೀಶ ಎಸ್. ಶಾಸ್ತ್ರಿಯವರು ಪಾವಂಜೆಯಲ್ಲಿ ಪ್ರಸಿದ್ಧರಾದ ಜ್ಯೋತಿಷಿ, ಆಯುರ್ವೇದ ಹಾಗೂ ವೇದಾಂತಾಚಾರ್ಯರಾದ ದಿ। ದ್ವಿವೇದಿ ಸಾಂತೂರು ಸೀತಾರಾಮ್ ಶಾಸ್ತ್ರಿ ಹಾಗೂ ದಿ। ಸಾವಿತ್ರಿ ದಂಪತಿಗಳ ಸುಪುತ್ರ. ತಮ್ಮ ಪ್ರಾಥಮಿಕ ಸರ್ವ ಶಿಕ್ಷಣದ ನಂತರ ಮುಲ್ಕಿಯ ವಿಜಯ ಕಾಲೇಜಿನಲ್ಲಿ ಬಿ.ಎಸ್‌ಸಿ ಪದವಿಯನ್ನು ಪಡೆದರು. ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಎಂ.ಎ ಪದವಿಯಲ್ಲಿ ಸ್ವರ್ಣ ಪದಕ ವಿಜೇತರಾಗಿರುವ ಇವರು ಹಂಪಿ ವಿಶ್ವವಿದ್ಯಾನಿಲಯದ ಎಂ.ಫಿಲ್. ಪದವಿಯನ್ನು ಪಡೆದಿರುತ್ತಾರೆ.

ತಮ್ಮ ತೀರ್ಥ ರೂಪರಾದ ದಿ। ದ್ವಿವೇದಿ ಸಾಂತೂರು ಸೀತಾರಾಮ್ ಶಾಸ್ತ್ರಿಗಳಿಂದ ಋಗ್ವೇದ–ಯಜುರ್ವೇದಗಳ ಸಂಹಿತಾ ಪಾಠವನ್ನು ಅಧ್ಯಯನ ಮಾಡಿದ್ದಲ್ಲದೆ ಮೈಸೂರಿನ ಚತುಃಶಾಸ್ತ್ರ ವಿದ್ವಾನ್ ದಿ। ಕೋಟ ವಾಸುದೇವ ಸೋಮಯಾಜಿಯವರಿಂದ ಜ್ಯೋತಿಷ್ಯ ಶಾಸ್ತ್ರ ಹಾಗೂ ತಂತ್ರಶಾಸ್ತ್ರಗಳನ್ನು ಅಧ್ಯಯನ ಮಾಡಿರುತ್ತಾರೆ.

ಶ್ರೀಯುತರು 1991ರಿಂದ ಸುರತ್ಕಲ್ ಗೋವಿಂದದಾಸ್ ಕಾಲೇಜಿನ ಸಂಸ್ಕೃತ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

1981ರಲ್ಲಿ ತಂದೆ ದ್ವಿವೇದಿ ಸಾಂತೂರು ಸೀತಾರಾಮ ಶಾಸ್ತ್ರಿಗಳ ಆಶೀರ್ವಾದ ಪಡೆದು ತಂತ್ರಿ ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ. ಇದೀಗ ಇವರು ಸುಮಾರು ಹದಿನೆಂಟು ದೇವಾಲಯಗಳ ಜೀರ್ಣೋದ್ಧಾರ ಪ್ರತಿಷ್ಠಾಕುಂಭಾಭಿಷೇಕಗಳು ಹಾಗೂ ಹಲವಾರು ವಾರ್ಷಿಕ ಉತ್ಸವಗಳನ್ನು ನಡೆಸಿಕೊಟ್ಟಿದ್ದಾರೆ. ಶೃಂಗೇರಿ ಪೀಠದ ಜಗದ್ಗುರುಗಳ ಅಪ್ಪಣೆಯಂತೆ ಐದು ದೇವಾಲಯಗಳಲ್ಲಿ ತಂತ್ರಿ ಸ್ಥಾನದ ಕರ್ತವ್ಯ ಪಾಲನೆ ಮಾಡುತ್ತಿದ್ದಾರೆ. ಪೌರೋಹಿತ್ಯದಲ್ಲಿ ಅಪಾರ ಅನುಭವ ಹೊಂದಿರುವ ಇವರು ಹಲವು ವೈದಿಕರನ್ನು ಸಿದ್ಧಗೊಳಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ದಿ। ಸಿ.ಆರ್. ಬೆಳ್ಳೆಯವರ ನೇತೃತ್ವದಲ್ಲಿ ಸಹಸ್ರನಾರಿಕೇಳ ಮಹಾಗಣಪತಿಯಾಗ ಹಾಗೂ ಶತಚಂಡಿಕಾಯಾಗಗಳನ್ನು ಹಲವು ಬಾರಿ ಸಂಪನ್ನಗೊಳಿಸಿದ ಕೀರ್ತಿಯು ಇವರದ್ದಾಗಿದೆ. ಪಡುಬಿದ್ರೆಯಲ್ಲಿ ನಡೆದ ಋಕ್‌ಸಂಹಿತಾಯಾಗವು ಇವರ ನೇತೃತ್ವದಲ್ಲಿ ನೆರವೇರಿದೆ.

ಭಾಷಣ–ಪ್ರವಚನಗಳಲ್ಲಿಯೂ ನಿಷ್ಣಾತರಾಗಿ ತಮ್ಮ ಜ್ಞಾನವನ್ನು ಪ್ರಸಾರ ಮಾಡಿರುವುದಲ್ಲದೆ, ಬರವಣಿಗೆಯ ಮೂಲಕವೂ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಧಾರ್ಮಿಕ ವಿಚಾರಗಳ ಇವರ ಲೇಖನಗಳು ಆಗಾಗ ಹಲವು ಪತ್ರಿಕೆಗಳಲ್ಲಿ ಪ್ರಸಾರಗೊಂಡಿವೆ. "ಶ್ರೀ ಗುರುಗುಹ ಪ್ರಕಾಶನ" ಸಂಸ್ಥೆಯ ಮೂಲಕ ಎಂಟು ಸ್ತೋತ್ರ ಪುಸ್ತಕಗಳ ಬಿಡುಗಡೆಯಾಗಿವೆ. ವೈದಿಕ ಶಿಬಿರಗಳಲ್ಲಿ ವಿದ್ಯಾರ್ಥಿಗಳಿಗೆ ಶ್ರದ್ಧಾ ಪಾಠವನ್ನು ಬೋಧಿಸುವ ಇವರು ಅನೇಕ ಶಿಷ್ಯ ವರ್ಗವನ್ನು ಹೊಂದಿರುತ್ತಾರೆ.

ಶ್ರೀ ವಾಗೀಶ ಎಸ್.ಶಾಸ್ತ್ರಿಯವರ ಧರ್ಮಪತ್ನಿ ಶ್ರೀಮತಿ ಉಮಾ ಎಸ್. ಶಾಸ್ತ್ರಿಯವರು ಸಂಸ್ಕೃತ ಎಂ.ಎ. ಪದವೀಧರೆಯಾಗಿದ್ದು, ಉಡುಪಿಯ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಭಾರ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪುತ್ರ ಶ್ರೀವತ್ಸ ಶಾಸ್ತ್ರಿ ಎಂ.ಟೆಕ್. ಪದವಿ ಪಡೆದು ಮುಂದಿನ ಅಧ್ಯಯನಕ್ಕೆ ಯೋಜಿಸುತ್ತಿದ್ದಾರೆ. ಪುತ್ರಿ ಕು। ಗೌರೀಶಾಸ್ತ್ರಿ ರಸಾಯನ ಶಾಸ್ತ್ರದಲ್ಲಿ ಎಂ.ಎಸ್.ಸಿ. ಪದವಿಯಲ್ಲಿ ಓದುತ್ತಿದ್ದಾಳೆ.

ಪ್ರಕೃತ ಉಡುಪಿ ಪುತ್ತೂರಿನ ಶ್ರೀ ದುರ್ಗಾ ದೇವಸ್ಥಾನದ ಬಳಿ "ವನಸುಮ" ಮನೆಯಲ್ಲಿ ವಾಸ್ತವ್ಯದಲ್ಲಿರುವ ಶ್ರೀ ವಾಗೀಶ ಎಸ್. ಶಾಸ್ತ್ರಿಯವರು ಉಡುಪಿ ಜಿಲ್ಲೆಯ ಶೃಂಗೇರಿ ಪೀಠದ ಶ್ರದ್ಧಾವಂತರಿಗೆ – ಶ್ರೀಮಠದ ಮತ್ತು ಜಗದ್ಗುರುಗಳ ನಡುವೆ ಕೊಂಡಿಯಾಗಿ ಕೆಲಸ ನಿರ್ವಹಿಸಲು ಅರ್ಹರಾಗಿಯೇ ಆಯ್ಕೆಯಾಗಿದ್ದಾರೆ.

ಇಂತಹ ಒಬ್ಬ ಅನುಭವಿ ತಂತ್ರಿಗಳಾದ ಶ್ರೀ ವಾಗೀಶ ಎಸ್.ಶಾಸ್ತ್ರಿಯವರನ್ನು ಶ್ರೀಮಠ ಶೃಂಗೇರಿಯು ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿಗಳನ್ನಾಗಿ ನಿಯೋಜನೆಗೊಳಿಸಿದ್ದು ಅವರ ಶಿಷ್ಯ ವರ್ಗದವರೆಲ್ಲರಿಗೆ ಸಂತೋಷವನ್ನು ನೀಡಿದೆ. ಅದಲ್ಲದೆ ಉಡುಪಿಯ ಕಾರ್ಯಕ್ರಮದ ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಜಗದ್ಗುರುಗಳು ಈ ಘೋಷಣೆ ಮಾಡಿ, ಸನದು ಪ್ರಧಾನ ಮಾಡಿದ ಬಗ್ಗೆ ಸ್ಥಾನಿಕ ಸಮಾಜವು ಶೃಂಗೇರಿ ಪೀಠಕ್ಕೆ ಅನಂತ ನಮನಗಳನ್ನು ಸಲ್ಲಿಸುತ್ತದೆ.

## ನಂದಳಿಕೆ ಬಾಲಚಂದ್ರರಾಯರಿಗೆ ಸನ್ಮಾನ



ಶ್ರೀ ನಂದಳಿಕೆ ಬಾಲಚಂದ್ರರಾಯರನ್ನು ಅವರು ಸಾಹಿತ್ಯ ಕ್ಷೇತ್ರದಲ್ಲಿ ಗೈದ ಸಾಧನೆಗಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಸಾಧಕ ಸನ್ಮಾನವನ್ನು ಪ್ರದಾನಿಸ ಗೌರವಿಸಲಾಯಿತು. ಇವರು ನಂದಳಿಕೆಯ ಮುದ್ದಣ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿ ಮುದ್ದಣನ ಹಲವಾರು ಕೃತಿಗಳನ್ನು ಮುದ್ರಿಸಿ ಬೆಳಕಿಗೆ ತಂದಿದ್ದಾರೆ. ಮುದ್ದಣ ಊರಾದ ನಂದಳಿಕೆಯ ಅಭಿವೃದ್ಧಿಗೆ ಶ್ರಮಿಸಿ ಆ ಕುಗ್ರಾಮಕ್ಕೆ ರಸ್ತೆ, ಬಸ್ಸು, ಆಸ್ಪತ್ರೆ ಬರುವಲ್ಲಿ ಅವಿರತ ಶ್ರಮ ವಹಿಸಿದ್ದಾರೆ. ಇವರನ್ನು ಮಣಿಪಾಲದ ಮಾಹೆಯೂ ಸೇರಿದಂತೆ ನೂರಾರು ಸಂಘ ಸಂಸ್ಥೆಗಳು ಸನ್ಮಾನಿಸಿವೆ.

## ಡಾ। ಸಂತೋಷ್ ಕುಮಾರ್ ಅಡೂರ್‌ರವರಿಗೆ ರಾಜ್ಯೋತ್ಸವ ಪ್ರಶಸ್ತಿ



ಕಾಸರಗೋಡು ಅಡೂರಿನ ಶ್ರೀ ಅಡೂರು ಶ್ರೀಧರರಾವ್–ಶಾಂಭವಿ ದಂಪತಿಗಳ ಪುತ್ರ, ಬೇಲೂರಿನ ಪ್ರಸಿದ್ಧ ವೈದ್ಯರಾದ ಡಾ ಸಂತೋಷ್ ಕುಮಾರ್ ಅಡೂರುರವರನ್ನು 2019ನೇಇಸವಿಯ ಕರ್ನಾಟಕ ರಾಜೋತ್ಸವದ ಸಂದರ್ಭದಲ್ಲಿ ತಾಲೂಕು ರಾಜ್ಯೋತ್ಸವ ಪ್ರಶಸ್ತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ತಾಲೂಕು ಆಡಳಿತದ ಪರವಾಗಿ ಪ್ರದಾನಿಸಿ ಗೌರವಿಸಲಾಯಿತು. ಇವರು ಹಾಸನ ಆಯುಷ್ ವೈದ್ಯರ ಸಂಘದ ಕಾರ್ಯದರ್ಶಿಯಾಗಿ, ವೈದ್ಯಕೀಯ ಪ್ರಕೋಷ್ಠ ಬೇಲೂರು ಇದರ ಅಧ್ಯಕ್ಷರಾಗಿ, ಬೇಲೂರು ಲಯನ್ಸ್ ಕ್ಲಬ್‌ನ ಅಧ್ಯಕ್ಷರಾಗಿ, ದೇಶಭಕ್ತರ ಬಳಗದ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ.

## ಸುರತ್ಕಲ್‌ನಲ್ಲಿ ಶ್ರೀ ಸುಬ್ರಹ್ಮಣ್ಯ ಟ್ರೋಫಿ 2019–20




ತಾ.19.01.2020ನೇ ರವಿವಾರ ಸುರತ್ಕಲ್ ಸಂಘದ ಯುವ ವೇದಿಕೆಯ ವತಿಯಿಂದ 5ನೇ ವರ್ಷದ ಶ್ರೀ ಸುಬ್ರಹ್ಮಣ್ಯ ಟ್ರೋಫಿ ಕ್ರಿಕೆಟ್ ಪಂದ್ಯಾಟವು ಪಣಂಬೂರಿನ ಎನ್.ಎಂ.ಪಿ.ಟಿ.ಯ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಬೆಳಗ್ಗೆ ಆರಂಭವಾಯಿತು. ಶ್ರೀಮತಿ ಪುಷ್ಪಾ ಶ್ರೀನಿವಾಸ ರಾವ್ ಹಾಗೂ ಶ್ರೀ ಪ್ರವೀಣ್ ಕುಮಾರ್ ಅದ್ಯಪಾಡಿ, ಸಂಘದ ಅಧ್ಯಕ್ಷರಾದ ಶ್ರೀ ಕೆ.ಮಾಧವ ರಾವ್, ಉಪಾಧ್ಯಕ್ಷರಾದ ಶ್ರೀ ಸುಕುಮಾರ್ ಎಂ.ಯು., ಶ್ರೀ ಜನಕರಾಜ್, ಶ್ರೀ ಮಹೇಶ್ಚಂದ್ರ ರಾವ್, ಶ್ರೀ ಪಾಲಚಂದ್ರ ಶರ್ಮ ಹಾಗೂ ಮಹಿಳಾ ವೇದಿಕೆಯ ಸದಸ್ಯರು ಮತ್ತು ಯುವ ವೇದಿಕೆಯ ಸದಸ್ಯರ ಉಪಸ್ಥಿತಿಯಲ್ಲಿ ಪಂದ್ಯಾಟವು ಉದ್ಘಾಟನೆಗೊಂಡಿತು. ಸೀಮಿತ 6 ಓವರುಗಳನ್ನೊಳಗೊಂಡ ಈ ಕ್ರಿಕೆಟ್ ಪಂದ್ಯಾಟಕ್ಕೆ ರಾಜ್ಯಾದ್ಯಂತದಿಂದ ಸುಮಾರು 12 ತಂಡಗಳು ಭಾಗವಹಿಸಿದ್ದವು. ಬಂಟ್ವಾಳ, ಪಡುಬಿದ್ರಿ, ಸುರತ್ಕಲ್, ಕಾಪು, ಕುಂದಾಪುರ, ನಂದಳಿಕೆ, ಬೆಂಗಳೂರಿಂದ ಕ್ರೀಡಾಪಟುಗಳು ಪಾಲ್ಗೊಂಡರು. ನಂದಳಿಕೆ ಹಾಗೂ ಸುರತ್ಕಲ್ ತಂಡಗಳ ನಡುವೆ ನಡೆದ ಫೈನಲ್ ಪಂದ್ಯಾಟದಲ್ಲಿ ಪ್ರಥಮ ಸ್ಥಾನವನ್ನು ನಂದಳಿಕೆ ತಂಡವೂ, ದ್ವಿತೀಯ ಸ್ಥಾನವನ್ನು ಸುರತ್ಕಲ್ ತಂಡವೂ ಪಡೆದುಕೊಂಡಿತು. ಸಮಾರೋಪ ಸಮಾರಂಭದಲ್ಲಿ ಶ್ರೀ ದಿವಾಕರ ರಾವ್ ಪಡುಬಿದ್ರಿ, ಶ್ರೀ ಜನಾರ್ಧನ ರಾವ್ ಪಡುಬಿದ್ರಿ, ಶ್ರೀಮತಿ ಪುಷ್ಪಾ ಶ್ರೀನಿವಾಸ ರಾವ್ ಹಾಗೂ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಉಪಸ್ಥಿತರಿದ್ದು ಗೆದ್ದವರಿಗೆ ಹಾಗೂ ಉಳಿದ ಆಟಗಾರರಿಗೆ ಶುಭಾಶಯಗಳನ್ನು ಕೋರಿದರು. ಶ್ರೀ ಜನಕರಾಜ್ ಅವರು ಪ್ರಥಮ ಸ್ಥಾನದ ಬಹುಮಾನ ಮೊತ್ತವನ್ನೂ, ಶ್ರೀ ಪಾಲಚಂದ್ರ ಶರ್ಮ ಇವರು ದ್ವಿತೀಯ ಸ್ಥಾನದ ಮೊತ್ತವನ್ನೂ ಪ್ರಾಯೋಜಿಸಿದ್ದರು. ಬೆಳಗ್ಗಿನ ಉಪಾಹಾರ ಹಾಗೂ ಮಧ್ಯಾಹ್ನದ ಭೋಜನದ ವ್ಯವಸ್ಥೆಯನ್ನು ಶ್ರೀ ವಿಜಯ ಕುಮಾರ್ ಅದ್ಯಪಾಡಿ ಇವರು ಮಾಡಿರುತ್ತಾರೆ. ಕೋಶಾಧಿಕಾರಿಗಳಾದ ಶ್ರೀ ರಾಘವೇಂದ್ರ ರಾವ್.ಸಿ. ಇವರು ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ಸುಕುಮಾರ್ ಎಂ.ಯು. ಈ ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದವಿತ್ತರು.

## ನಿಧನ



### ರಿಯರ್ ಅಡ್ಮಿರಲ್ ಬಿ.ಆರ್.ವಸಂತ ಬೆಳ್ಳೆ

ರಿಯರ್ ಅಡ್ಮಿರಲ್ ಬಿ.ಆರ್. ವಸಂತರವರು ತಾ.18–02–2020ರಂದು ನಿಧನ ಹೊಂದಿದರು. ಭಾರತೀಯ ನೌಕಾಪಡೆಯ ಅತ್ಯುನ್ನತ ಸ್ಥಾನವನ್ನು ಏರಿದ ಇವರು 1971ರ ಬಾಂಗ್ಲಾ ವಿಮೋಚನೆಯ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 31 ವರ್ಷಗಳ ಕಾಲ ಭಾರತೀಯ ನೌಕಾ ಸೇನಾ ಪಡೆಯಲ್ಲಿ ಸೇವೆ ಸಲ್ಲಿಸಿ ರಿಯರ್ ಅಡ್ಮಿರಲ್ ಆಗಿ ನಿವೃತ್ತಿ ಹೊಂದಿದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ಹಲವಾರು ಸ್ವರ್ಣಪದಕಗಳನ್ನು ಗಳಿಸಿದ್ದುದಲ್ಲದೆ ಭಾರತೀಯ ನೌಕಾ ಪಡೆಯಲ್ಲಿ ತಮ್ಮ ಕಾರ್ಯಕ್ಷಮತೆಗಾಗಿ ವಿಶಿಷ್ಟ ಸೇವಾ ಪದಕವನ್ನೂ ಪಡೆದಿದ್ದಾರೆ. 1981–84ವರೆಗೆ ಕರ್ನಾಟಕ ಸರಕಾರದ ಕಂಪ್ಯೂಟರ್ ಆಧಾರಿತ ಆಡಳಿತ ಯೋಜನೆಯ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದಾರೆ. ನಿವೃತ್ತಿಯ ನಂತರ ಯುದ್ಧದಲ್ಲಿ ಗಾಯಾಳುಗಳಾದ ಯೋಧರ ನೆರವಿಗೆ ಸಂಸ್ಥೆಯನ್ನು ಸ್ಥಾಪಿಸಿ ನೆರವು ನೀಡುತ್ತಿದ್ದರು. ಇವರು ಶ್ರೀಮತಿ ಪದ್ಮಾವತಿ ಹಾಗೂ ಶ್ರೀ ಬೆಳ್ಳೆ ವಿಠಲ ರಾಯರ ಸುಪುತ್ರ. ಇವರಿಗೆ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತಿಮ ನಮನವನ್ನು ಸಲ್ಲಿಸಲಾಗಿತ್ತು.

★★★★ ★★★★



### ಶ್ರೀ ನಕ್ರೆ ಶಿವರಾಯರು

ಕಾರ್ಕಳ ಸಂಘದ ಸಕ್ರಿಯ ಸದಸ್ಯ ಹಾಗೂ ನಕ್ರೆ ಮಹಾಲಿಂಗೇಶ್ವರ ದೇವಸ್ಥಾನದ ಮೊಕ್ತೇಸರರಾದ ಶ್ರೀ ನಕ್ರೆ ಶಿವರಾಯರು ತಾ.08.02.2020ರಂದು ನಿಧನ ಹೊಂದಿದರು.

★★★★ ★★★★



### ಶ್ರೀ ವೈ. ರಾಮಕೃಷ್ಣ ರಾವ್

ಎಲ್ಲೂರು ಶ್ರೀ ವೈ. ರಾಮಕೃಷ್ಣ ರಾವ್‌ರವರು ತಾ.21.02.2020ರಂದು ನಿಧನ ಹೊಂದಿದರು.

★★★★ ★★★★

### ಶ್ರೀಮತಿ ಲಲಿತಾ ರಾವ್

ದಿ.ಎಲ್ಲೂರು ವಿಶ್ವನಾಥರಾಯರ ಧರ್ಮಪತ್ನಿ, ಮಣಿಪಾಲ ದಶರಥನಗರದ ನಿವಾಸಿ ಶ್ರೀಮತಿ ಲಲಿತಾ ರಾವ್ ಇವರು ತಾ.14.02.2020ರಂದು ನಿಧನಹೊಂದಿದರು.

★★★★ ★★★★



### ಶ್ರೀ ಹೆಚ್. ವೆಂಕಟೇಶ ಶರ್ಮ

ಬೆಂಗಳೂರಿನ ಶ್ರೀ ಹೆಚ್ ವೆಂಕಟೇಶ ಶರ್ಮ ಇವರು ತಾ.15.02.2020ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

★★★★ ★★★★

### ಶ್ರೀ ಕೆ. ಪಿ. ಸದಾಶಿವ ರಾವ್

ಕಾರ್ಕಳದ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಪಿ. ಸದಾಶಿವ ರಾವ್ ತಾ.15.02.2020ರಂದು ನಿಧನ ಹೊಂದಿದರು.

★★★★ ★★★★

### ಡಾ.ಐ.ಕೆ.ಭಾಗ್ಯಚಂದ್ರ ರಾವ್

ಮುಂಬಯಿ ನಿವಾಸಿ ಡಾ.ಐ.ಕೆ.ಭಾಗ್ಯಚಂದ್ರ ರಾವ್ ಇವರು ತಾ.13–02–2020ರಂದು ನಿಧನ ಹೊಂದಿದರು.

★★★★ ★★★★

### ಶ್ರೀಮತಿ ರಾಧಾ

ಮೂಡಬಿದ್ರೆ ಬೊಕ್ಕಸ ಕುಟುಂಬದ ದಿ। ದಾಮೋದರ ರಾಯರ ಪತ್ನಿ ಶ್ರೀಮತಿ ರಾಧಾ 14.02.2020ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

# ಕುಂದಾಪುರ ಸಂಘದ ರಜತ ಮಹೋತ್ಸವ



ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣರ ಸಂಘ (ರಿ) ಇದರ "ರಜತ ಮಹೋತ್ಸವ" ಸಮಾರಂಭವು ದಿನಾಂಕ 02-02-2020 ರಂದು ಶ್ರೀ ಕೃಷ್ಣ ಲಲಿತ ಕಲಾಮಂದಿರ, ನಾಗೂರು ಇಲ್ಲಿ ಶ್ರೀ ಎಚ್. ಹಿರಿಯಣ್ಣ ರಾವ್ ಮತ್ತು ಮಕ್ಕಳು, ಹೊಸ್ಕೋಟೆಯವರ ಆತಿಥ್ಯದಲ್ಲಿ ವಿಜೃಂಭಣೆಯಿಂದ ಜರುಗಿತು.

ಬೆಳಿಗ್ಗೆ ಗಂಟೆ 7-00ಕ್ಕೆ ಗಣಹೋಮ ಮತ್ತು ಗಾಯತ್ರಿ ಹೋಮ ಜರುಗಿತು. ಇದರ ನೇತೃತ್ವವನ್ನು ಶ್ರೀ ವೇದಮೂರ್ತಿ ಚಿದಾನಂದ ಶ್ಯಾನುಭೋಗ್ ವಹಿಸಿದ್ದರು. ಶ್ರೀ ಉಮೇಶ ಶ್ಯಾನುಭೋಗ್ ಮತ್ತು ಸಂಘದ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬೆಳ್ಳಿ ಹಬ್ಬದ ಸಭಾ ಕಾರ್ಯಕ್ರಮಗಳನ್ನು ಗಂಟೆ 10-00ರಿಂದ ಶ್ರೀ ಎಚ್. ಹಿರಿಯಣ್ಣ ರಾವ್ (ಸ್ಥಾಪಕ ಅಧ್ಯಕ್ಷರು) ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಜೆ. ಕೃಷ್ಣಗೋಪಾಲ ಹೆಬ್ಬಾರ್ ಅವರು ವಹಿಸಿದ್ದರು. ಶ್ರೀ ಎಚ್. ವೆಂಕಟೇಶ ರಾವ್ ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಎಚ್. ಜಗದೀಶ ರಾವ್ ಪ್ರಾಸ್ತಾವಿಕ ಭಾಷಣ ಮಾಡಿದರು. ಸಂಘದ ಬೆಳ್ಳಿಹಬ್ಬದ ಸ್ಮರಣ ಸಂಚಿಕೆಯನ್ನು ಶ್ರೀ ಪಿ. ಶೇಷಪ್ಪಯ್ಯ ಬಿಡುಗಡೆಗೊಳಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಸತ್ಯಶಂಕರ ಬೊಳ್ಳಾವ (ಧರ್ಮಾಧಿಕಾರಿ ಶ್ರೀ ಶಂಕರಮಠ, ಕೋಟೇಕಾರ್, ದ.ಕ. ಜಿಲ್ಲೆ) ಇವರು ಆಗಮಿಸಿ ತಮ್ಮ ಭಾಷಣದಲ್ಲಿ ಸ್ಥಾನಿಕ ಬ್ರಾಹ್ಮಣರ ಚಾರಿತ್ರಿಕ ಹಿನ್ನೆಲೆ, ಬ್ರಿಟೀಷ್ ಪೂರ್ವಕಾಲದಲ್ಲಿ ಸ್ಥಾನಿಕ ಬ್ರಾಹ್ಮಣರು ಆಡಳಿತದಲ್ಲಿ ಮುಖ್ಯ ವಾಹಿನಿಯಲ್ಲಿದ್ದು, ರಾಜಮಹಾರಾಜರ ಕಾಲದಲ್ಲಿ ಮಂತ್ರಿಗಳು, ಧರ್ಮಾಧಿಕಾರಿಗಳು, ಆಡಳಿತ ವಿಭಾಗದಲ್ಲಿ ದಕ್ಷತೆ, ಪ್ರಾಮಾಣಿಕತೆ ಸಂಪನ್ನರಾಗಿದ್ದು ಸಮಾಜದ ಎಲ್ಲಾ ವರ್ಗಗಳ ಪ್ರಶಂಸೆಗೆ ಪಾತ್ರರಾಗಿದ್ದರು.

1858ನೇ ಇಸವಿಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೊಡಗು ಮತ್ತು ಕುಂಬಳೆ ಪ್ರದೇಶದಲ್ಲಿ "ಸಿಪಾಯಿ ದಂಗೆ"ಯಾದಾಗ ಸ್ಥಾನಿಕರು ಈ ಸಂಗ್ರಾಮದಲ್ಲಿ ಕೈಜೋಡಿಸಿದ ಪ್ರಯುಕ್ತ ಬ್ರಿಟೀಷರು ಸ್ಥಾನಿಕ ಮುಖಂಡರನ್ನು ಬಂಧಿಸಿ, ನಮಗೆ ನಾಯಕತ್ವ ಇಲ್ಲದಂತೆ ಮಾಡಿ, ನಮ್ಮ ಸಮಾಜಕ್ಕೆ ಎಲ್ಲಾ ಕ್ಷೇತ್ರಗಳಲ್ಲಿ ಹಿನ್ನಡೆಯಾಗುವಂತೆ ಮಾಡಿದರು.

ಪ್ರಸ್ತುತ ಸ್ಥಾನಿಕ ಬ್ರಾಹ್ಮಣರು ಸಂಘ, ಸಂಸ್ಥೆಗಳನ್ನು ಕಟ್ಟಿ ಬೆಳೆಸಿ ಸ್ವಾವಲಂಬನೆ, ಸಂಸ್ಕಾರ, ಸಂಘಟನೆಗಳನ್ನು ಮೂಲ ಮಂತ್ರವಾಗಿಸಿ ಸಮಾಜದಲ್ಲಿ ಬದುಕುತ್ತಿದ್ದಾರೆ. ಸುದೈವವಶಾತ್ "ಶೃಂಗೇರಿ ಗುರುಪೀಠ"ದ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಇಂದು ನಾವು ಎಲ್ಲಾ ರಂಗಗಳಲ್ಲಿ ಸ್ವಾವಲಂಬನೆಯೊಂದಿಗೆ ಬದುಕುತ್ತಾ ಇದ್ದೇವೆ. ನಮ್ಮ ಮಕ್ಕಳು ಮತ್ತು ಯುವಕರು ಉತ್ತಮವಾದ ವಿದ್ಯಾಭ್ಯಾಸ ದಿಂದ ಪ್ರಜ್ಞಾವಂತರಾಗಿ, ದೇಶ ವಿದೇಶಗಳಲ್ಲಿ ಬದುಕುತ್ತಿರುವುದು ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಇನ್ನೋರ್ವ ಅತಿಥಿ ಶ್ರೀ ಶ್ಯಾಮ್ ಪ್ರಸಾದ್ ಶ್ಯಾನುಭೋಗ್ (ಎ.ಜಿ.ಎಂ. ಕಾರ್ಪೊರೇಶನ್ ಬ್ಯಾಂಕ್ ಉಡುಪಿ) ಸಮಯೋಚಿತವಾಗಿ ಮಾತನಾಡಿದರು. ಸಂಘದ ಅಧ್ಯಕ್ಷ ಶ್ರೀ ಜೆ. ಕೃಷ್ಣಗೋಪಾಲ ಹೆಬ್ಬಾರ ಮಾತನಾಡುತ್ತಾ ಒಂದು ತಿಂಗಳ ಒಳಗೆ ಒಂದು "ಸಹಕಾರಿ ಸಂಘ"ವನ್ನು ಉಪ್ಪುಂದದಲ್ಲಿ ಪ್ರಾರಂಭಿಸುವುದಾಗಿ ತಿಳಿಸಿದರು. ಸಭೆಯಲ್ಲಿ ಶ್ರೀ ಎ. ಗೋಪಾಲ ಹೆಬ್ಬಾರ (ನಿಕಟಪೂರ್ವ ಅಧ್ಯಕ್ಷರು) ಉಪಸ್ಥಿತರಿದ್ದರು.

ಸಂಘದ ಸಮಾರೋಪ ಸಮಾರಂಭವು ಮಧ್ಯಾಹ್ನ ಗಂಟೆ 3-00ಕ್ಕೆ ಶ್ರೀ ಜೆ. ಕೃಷ್ಣಗೋಪಾಲ ಹೆಬ್ಬಾರ (ಸಂಘದ ಅಧ್ಯಕ್ಷರು) ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಅತಿಥಿಗಳಾದ ಶ್ರೀ ಶರವೂರು ಶ್ರೀನಿವಾಸ ರಾವ್ (ದರ್ಶನ ಪಾತ್ರಿಗಳು, ಶಾಸ್ತಾರ ವಿಷ್ಣುಮೂರ್ತಿ ದೇವಸ್ಥಾನ, ಪಡುಮಲೆ ಮತ್ತು ಸಾಮಾಜಿಕ ಕಾರ್ಯಕರ್ತರು), ಶ್ರೀ ಬಿ. ವಿಶ್ವೇಶ್ವರ ಅಡಿಗ, ಶ್ರೀ ದಯಾನಂದ ರಾವ್, ಶಂಕರನಾರಾಯಣ, ಶ್ರೀಮತಿ ಸರೋಜಾ ಮರವಂತೆ, ಶ್ರೀ ಎ. ಗೋಪಾಲಕೃಷ್ಣ ಹೆಬ್ಬಾರ್ ಉಪಸ್ಥಿತರಿದ್ದರು. ಸಂಘದಿಂದ ಶ್ರೀ ಉಮೇಶ ಶ್ಯಾನುಭೋಗ ಪ್ರಾಯೋಜಿಸಿದ ಪ್ರತಿಭಾ ಪುರಸ್ಕಾರ, ಶ್ರೀ ಉದಯ ಕುಮಾರ್ ಹೆಬ್ಬಾರ್ ಪ್ರಾಯೋಜಿಸಿದ ವಿದ್ಯಾರ್ಥಿ ವೇತನ ವಿತರಿಸಲಾಯಿತು. ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಜಯಿಸಿದವರಿಗೆ ಬಹುಮಾನಗಳನ್ನು ನೀಡಲಾಯಿತು. ಶ್ರೀ ಪ್ರಭಾಕರ ಮೇರ್ಟ ಸ್ವಾಗತಿಸಿದರು. ಶ್ರೀ ಸುಬ್ರಹ್ಮಣ್ಯ ರಾವ್ ಎಚ್. ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರೂಪಿಸಿದರು. ಶ್ರೀಮತಿ ವಾಣಿ ಸುಭಾಸ್, ಶ್ರೀ ಎಚ್. ಲಕ್ಷ್ಮೀನಾರಾಯಣ ರಾವ್, ಶ್ರೀ ಗಣೇಶಮೂರ್ತಿ ಹೆಬ್ಬಾರ್ ಇವರು ನಿರೂಪಣೆಯಲ್ಲಿ ಸಹಕರಿಸಿದರು. ಸಂಘದ ಸದಸ್ಯರಿಂದ "ಜಾಂಬವತಿ ಕಲ್ಯಾಣ" ಯಕ್ಷಗಾನ ಯಶಸ್ವಿಯಾಗಿ ನಡೆಯಿತು.

ಶ್ರೀ ಎಂ. ಸತ್ಯನಾರಾಯಣ ಹೆಬ್ಬಾರ್ (ಸಂಘದ ಖಜಾಂಚಿ) ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವನ್ನು ಅಂತ್ಯಗೊಳಿಸಲಾಯಿತು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ }

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.11-04-2020 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.13-04-2020 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.29-03-2020 ಮತ್ತು ತಾ.12-04-2020 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಮೀನ ಮಾಸದ ವಿಶೇಷ ದಿನಗಳು

| | | | |
|---|---|---|---|
| 14-03-2020 | ಮೀನ ಸಂಕ್ರಮಣ | 04-04-2020 | ಸರ್ವೈಕಾದಶಿ |
| 19-03-2020 | ಸರ್ವೈಕಾದಶಿ | 08-04-2020 | ಹುಣ್ಣಿಮೆ |
| 24-03-2020 | ಅಮಾವಾಸ್ಯೆ | 09-04-2020 | ವಸಂತ ಋತು ಚೈತ್ರ ಮಾಸದ ಕೃಷ್ಣಪಕ್ಷಾರಂಭ |
| 25-03-2020 | ಶಾರ್ವರಿ ಸಂವತ್ಸರದ ಆರಂಭ ಚಾಂದ್ರ ಯುಗಾದಿ ವಸಂತ ಋತು ಚೈತ್ರ ಮಾಸದ ಶುಕ್ಲಪಕ್ಷಾರಂಭ ಕಿರು ನವರಾತ್ರಿ ಆರಂಭ | 11-04-2020 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 10-10ಕ್ಕೆ |
| | | 13-04-2020 | ಮೇಷ ಸಂಕ್ರಮಣ |
| | | 14-04-2020 | ಸೌರ ಯುಗಾದಿ |
| 02-04-2020 | ಶ್ರೀ ರಾಮ ನವಮಿ | 18-04-2020 | ಸರ್ವೈಕಾದಶಿ |

ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

SAMPATH KUMAR Mobile : 9741508881
TRISHULINI TOURIST
The Tourist People
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯೆಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

Ashwath
Mobile : 9480532202
9663146180
Email : aheperdoor@gmail.com
SKANDA
Digital Studio
Photography & Videography
Near Syndicate Bank
Car Street
Perdoor - 576 124
Udupi Tq. & Dist.

## ಶುಭ ವಿವಾಹ

ಮುಂಬಯಿಯ ಶ್ರೀ ಬಜ್ಪೆ ಕಿಶೋರ್ ರಾವ್ ಹಾಗೂ ವಸುಮತಿ ಇವರ ಪುತ್ರ **ಅರ್ಜುನ್** ಹಾಗೂ ಹೆಮ್ಮಾಡಿ ಶ್ರೀ ನಾಗೇಶ್ ಹೆಬ್ಬಾರ್ ಹಾಗೂ ಶ್ರೀಮತಿ ಉಷಾರವರ ಪುತ್ರಿ **ವಾಣಿಶ್ರೀ**ಯವರ ವಿವಾಹವು **ತಾ.11.03.2020ರಂದು** ಕೋಟೇಶ್ವರದ ಸರಸ್ವತೀ ಕಲ್ಯಾಣ ಮಂಟಪದಲ್ಲಿ ನೆರವೇರಿತು

★★★★ ★★★★

ಬೆಂಗಳೂರು ಕುರಯ ಶ್ರೀ ಕುಮಾರ ಸ್ವಾಮಿ ಶಾಸ್ತ್ರಿ ಹಾಗೂ ಶ್ರೀಮತಿ ಉಮಾ ರವರ ಪುತ್ರಿ **ಶ್ವೇತಾ** ಹಾಗೂ ಬೆಂಗಳೂರು ಶ್ರೀಮತಿ ಲತಾ ಧಾರೇಶ್ವರ ಹಾಗೂ ದಿ. ಮಧುಕರ್ ಧಾರೇಶ್ವರ್‌ರವರ ಪುತ್ರ **ಸಚಿನ್** ಇವರ ವಿವಾಹವು **ತಾ.08.03.2020ರಂದು** ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★ ★★★★

ನೆಲ್ಲಿಕುಂಜ ಶ್ರೀಮತಿ ಉಷಾ ಹಾಗೂ ಶ್ರೀ ಸತೀಶ್ಚಂದ್ರ ಇವರ ಪುತ್ರ **ಕೌಷಲ್** ಹಾಗೂ ನಂದಿಕೂರು ಶ್ರೀಮತಿ ಶೈಲಜಾ ಹಾಗೂ ಶ್ರೀ ಕೆ.ಶ್ರೀನಿವಾಸರಾವ್ ಇವರ ಪುತ್ರಿ **ಸ್ನೇಹ** ಇವರ ವಿವಾಹವು **ತಾ.26.02.2020ರಂದು** ನಂದಿಕೂರು ರಾಜರಾಜೇಶ್ವರಿ ಸಭಾಂಗಣ ದಲ್ಲಿ ನೆರವೇರಿತು

★★★★ ★★★★

ಸಾಲಿಗ್ರಾಮದ ಶ್ರೀಮತಿ ಶುಭಾ ಹಾಗೂ ಶ್ರೀ ಎಸ್.ಕೃಷ್ಣಮೂರ್ತಿ ಹೆಬ್ಬಾರ್ ಇವರ ಪುತ್ರ **ಸಂದೇಶ** ಹಾಗೂ ಉಬರಳೆ ಶ್ರೀಮತಿ ಭಾರತಿ ಹಾಗೂ ಶ್ರೀ ದಿವಾಕರರಾವ್ ಇವರು ಪುತ್ರಿ **ಅಶ್ವಿನಿ** ಇವರ ವಿವಾಹವು **ತಾ.26.01.2020ರಂದು** ವಾಮಂಜೂರು ಗುರುನರಸಿಂಹ ಸಭಾಂಗಣದಲ್ಲಿ ನೆರವೇರಿತು

## ಬ್ರಹ್ಮೋಪದೇಶ

**ಚಿ| ಮೋಹಿತ್**

ಎಲ್ಲೂರು ಶ್ರೀ ರಾಕೇಶ ರಾವ್ ಹಾಗೂ ಶ್ರೀಮತಿ ಶ್ವೇತಾರವರ ಪುತ್ರ ಮೋಹಿತ್‌ನ ಬ್ರಹ್ಮೋಪದೇಶ ಸಮಾರಂಭವು **ತಾ.04.03.2020ರಂದು** ಎರ್ಮಾಳಿನ ಶ್ರೀ ಜನಾರ್ದನ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಗೃಹಪ್ರವೇಶ

ಉಡುಪಿ ಕುಕ್ಕಿಕಟ್ಟೆಯ ಶ್ರೀ ಅರುಣ್ ಕುಮಾರ್ ಹಾಗೂ ಶ್ರೀಮತಿ ಸವಿತಾ ದಂಪತಿಗಳು ಉಡುಪಿ ಗುಂಡಿಬೈಲಿನಲ್ಲಿ ನೂತನವಾಗಿ ನಿರ್ಮಿಸಿದ ಸ್ವಗೃಹ **"ನೇಸರ"**ದ ಗೃಹಪ್ರವೇಶ ಸಮಾರಂಭವನ್ನು **ತಾ.27.02.2020ರಂದು** ನೆರವೇರಿಸಿದರು.

★★★★ ★★★★

ಉಡುಪಿ ಚಿಟ್ಪಾಡಿಯ ಶ್ರೀ ನಾರಾಯಣರಾವ್ ಹಾಗೂ ಶ್ರೀಮತಿ ವಿದ್ಯಾಲಕ್ಷ್ಮಿ ದಂಪತಿಗಳು ಚಿಟ್ಪಾಡಿಯಲ್ಲಿ ನಿರ್ಮಿಸಿದ ನೂತನ ಗೃಹ **"ನಿನೆವೀನಾ"** ಇದರ ಗೃಹಪ್ರವೇಶ ಸಮಾರಂಭವನ್ನು ತಾ **12.03.2020ರಂದು** ನೆರವೇರಿಸಿದರು.

★★★★ ★★★★

ಉಡುಪಿ ಚಿಟ್ಪಾಡಿಯ ಶ್ರೀ ಹರಿಶ್ಚಂದ್ರ ರಾವ್ ಹಾಗೂ ಶ್ರೀಮತಿ ಸರೋಜಿನಿ ದಂಪತಿಗಳು ಚಿಟ್ಪಾಡಿ ಡಯನಾ ಟಾಕೀಸ್ ರಸ್ತೆಯಲ್ಲಿಯಲ್ಲಿ ನಿರ್ಮಿಸಿದ ನೂತನ ಗೃಹ **"ಧೀಮಹಿ"** ಇದರ ಗೃಹಪ್ರವೇಶ ಸಮಾರಂಭವನ್ನು **ತಾ.13.03.2020ರಂದು** ನೆರವೇರಿಸಿದರು.

★★★★ ★★★★

ಉಡುಪಿ ಹಿರಿಯಡ್ಕದ ಶ್ರೀ ನಾಗರಾಜ ಪಿ.ಎಂ. ಹಾಗೂ ಶ್ರೀಮತಿ ಹರಿಣಾಕ್ಷಿ ದಂಪತಿಗಳು ಹಿರಿಯಡಕ ಗುಡ್ಡೆಯಂಗಡಿ ಷಡಂಗರಬೆಟ್ಟಿನಲ್ಲಿ ನಿರ್ಮಿಸಿದ ನೂತನ ಗೃಹ **"ಓಂ ಶ್ರೀ"** ಇದರ ಗೃಹಪ್ರವೇಶ ಸಮಾರಂಭವನ್ನು **ತಾ.12.02.2020ರಂದು** ನೆರವೇರಿಸಿದರು.

★★★★ ★★★★

ಪುತ್ತೂರು ಶ್ರೀ ಎನ್ ಎಸ್ ನಟರಾಜ ಹಾಗೂ ಶ್ರೀಮತಿ ಚಂದ್ರಶ್ರೀ ಯವರ ಪುತ್ರ ಶ್ರೀ ಹೇಮಂತ ಹಾಗೂ ಶ್ರೀಮತಿ ಅಮೃತಾ ದಂಪತಿಗಳು ಪುತ್ತೂರು ದರ್ಭೆಯಲ್ಲಿರುವ ಆರ್.ಇ.ಬಿ. ಎನ್‌ಕ್ಲೇವ್‌ನಲ್ಲಿ ಖರೀದಿಸಿದ ಮಹಡಿಮನೆ **ಸಂತೃಪ್ತಿ** ಇದರ ಗೃಹಪ್ರವೇಶವನ್ನು **ತಾ.13.03.2020ರಂದು** ನೆರವೇರಿಸಿದರು.

## ಷಷ್ಟ್ಯಬ್ದಿ ಸಮಾರಂಭ

ತಾ.01.03.2020ರಂದು ಬಿ. ರಮೇಶ್ ರಾವ್ ಅಡ್ಕದ ಕಟ್ಟೆ ಇವರ ಷಷ್ಟ್ಯಬ್ದಿ ಸಮಾರಂಭವು ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು, ಪಡುಬಿದ್ರಿ

ಸಮಾಜ ಬಾಂಧವರೇ,

ಶ್ರೀ ದೇವಳದಲ್ಲಿ ವರ್ಷಂಪ್ರತಿ ನಡೆಯುವ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಮತ್ತು ವಿಷ್ಣುಮೂರ್ತಿ ದೇವಸ್ಥಾನ (ರಿ.) ಪಾದೆಬೆಟ್ಟು ಇವರ ಸಂಯೋಜನೆಯಲ್ಲಿ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ಶ್ರೀ ಕೃಷ್ಣರಾಜ್ ಭಟ್ ಹೆಜಮಾಡಿ ಇವರ ನೇತೃತ್ವದಲ್ಲಿ **ತಾ.12.04.2020 ರವಿವಾರದಿಂದ ತಾ.19.04.2020 ರವಿವಾರದ ವರೆಗೆ**

### ವೈದಿಕ ಶಿಬಿರ

ನಡೆಯಲಿದ್ದು ನಮ್ಮ ಸಮಾಜದ ಎಲ್ಲಾ ವಟುಗಳು ಈ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

ಆಡಳಿತ ಮಂಡಳಿ

**ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು ಮತ್ತು ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ**

ಶಿಬಿರದ ಪ್ರಧಾನ ಪ್ರಾಯೋಜಕರು :

**ಎಲ್ಲೂರು ಶ್ರೀ ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಟ್ರಸ್ಟ್ (ರಿ).**
**ಇನ್ನ ಎ.ಬಿ.ಸಿ.ಡಿ. ಮತ್ತು ಇ ಟ್ರಸ್ಟ್ (ರಿ), ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು**
**ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ.**

**ವಿಶೇಷ ಸೂಚನೆ :**

1) ವಟುಗಳು ಸಂಧ್ಯಾ ವಂದನೆಗೆ ಬೇಕಾದ ಪಂಚಪಾತ್ರೆ ಹಾಗೂ ಸ್ವಂತಕ್ಕೆ ಬೇಕಾದ ವಸ್ತ್ರಗಳನ್ನು ಹಾಗೂ ಮಲಗಲು ಬೇಕಾದ ಹೊದಿಕೆ ಮತ್ತು ತಲೆದಿಂಬನ್ನು ತರಬೇಕು.
2) ಕಳೆದ ಬಾರಿ ಕೊಟ್ಟ ಪುಸ್ತಕವನ್ನು ತರಬೇಕು.
3) ಮೊಬೈಲ್ ಫೋನ್ ಕಡ್ಡಾಯವಾಗಿ ನಿಷೇಧಿಸಲಾಗಿದೆ.
4) ಸಮಾಜ ಬಾಂಧವರು ಜಪ ಹಾಗೂ ಪೂಜಾ ಕೈಂಕರ್ಯಗಳನ್ನು ಕಲಿಯಲು ಇಚ್ಛಿಸಿದ್ದಲ್ಲಿ (ಸಮಯ ಹಾಗೂ ವಯಸ್ಸಿನ ನಿರ್ಬಂಧನೆ) ಗಳಿಲ್ಲದೆ ಕಲಿಸಿ ಕೊಡುವ ವ್ಯವಸ್ಥೆ ಇದೆ.

**ಸಂಪರ್ಕಿಸಿ : ಶ್ರೀ ಕೃಷ್ಣರಾಜ ಭಟ್–9980195355,**
**ಶ್ರೀ.ಬಿ.ಜಯರಾಮ್ ರಾವ್– 9844545040 ಡಾ. ವೈ. ಸುದರ್ಶನ್ ರಾವ್–9845136322,**
**ಶ್ರೀ ಲಕ್ಷ್ಮೀಕಾಂತ್ ರಾವ್–9448156413, ಶ್ರೀ. ಎಮ್.ಕೆ. ದಿವಾಕರ್ ರಾವ್–9902169119,**
**ಶ್ರೀ ಸುಧಾಕರ್ ರಾವ್ ಬೆಳ್ಳೆ–9845193103.**

## ತಲೇಕಿ ದೇವಸ್ಥಾನದಲ್ಲಿ ಪ್ರತಿಷ್ಠಾವರ್ಧಂತಿ

ತಾ.01–02–2020ರ ಶನಿವಾರ ಕಡಬ ತಲೇಖಿ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ಪ್ರತಿಷ್ಠಾವರ್ಧಂತಿಯು ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಜರಗಿತು. ಬೆಳಗ್ಗೆ ಸುಪ್ರಭಾತ, ಗಣಹೋಮ ಮಹಾಗಣಪತಿ ಹವನ, ನರಸಿಂಹ ಹವನ, ವಿಶ್ವನಾಥ ದೇವರಿಗೆ ರುದ್ರಾಭಿಷೇಕ ಶ್ರೀನಿವಾಸದೇವರಿಗೆ ಪವಮಾನಾಭಿಷೇಕ, ಪಂಚವಿಂಶತಿ ಕಲಶಾಭಿಷೇಕ ಮತ್ತು ಮಹಾಪೂಜೆ, ನಾಗದೇವರಿಗೆ ತಂಬಿಲಸೇವೆ ಸಾಯಂಕಾಲ ದುರ್ಗಾಪೂಜೆ ಮತ್ತು ರಂಗಪೂಜೆ ಸೇವೆ ಹಾಗೂ ಭಜನಾಸೇವೆ ಜರಗಿತು. ಶ್ರೀ ನೃತ್ಯ ಕಲಾತಂಡ ಪಡುಬಿದ್ರೆ ಇದರ ಡಾ| ಭಾಗ್ಯಶ್ರೀ ಮತ್ತು ತಂಡದವರಿಂದ ಭರತನಾಟ್ಯ ಹಾಗೂ ಕೊಲ್ಲಂಗಾನ ಮೇಳದವರಿಂದ ಶಬರಿಮಲೆ ಅಯ್ಯಪ್ಪ ಎಂಬ ಯಕ್ಷಗಾನ ಬಯಲಾಟವು ಜರಗಿತು. ಪ್ರಮೋದ್ ಅಟೋಮೊಬೈಲ್ಸ್ ಮಂಗಳೂರಿನ ಶ್ರೀ ಕೇದಗೆ ಹರ್ಷಕುಮಾರ್ ಹಾಗೂ ಕನಕವಲ್ಲಿ ಹರ್ಷಕುಮಾರ್ ದಂಪತಿಗಳು ವಾರ್ಷಿಕೋತ್ಸವವನ್ನು ಪ್ರಾಯೋಜಿಸಿದ್ದರು. ಪ್ರಕಾಶ್ ಕಡಬ ಬೆಂಗಳೂರು, ಸುರೇಶ ಕಡಬ ಮಂಗಳೂರು ಮತ್ತು ರಾಜೇಶ್ ಕೆ ತಲೇಖಿ ಹಾಗೂ ಭರತೇಶ್ವರ ಶರ್ಮ ಮುಂಬಯಿ ಹಾಗೂ ಆಡಳಿತ ಮಂಡಳಿಯ ಸದಸ್ಯರ ಸಹಕಾರದೊಂದಿಗೆ ಕಾರ್ಯಕ್ರಮವು ವಿಜೃಂಭಣೆಯಿಂದ ನೆರವೇರಿತು.


**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com


Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521




ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.


ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು



**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಷಷ್ಟ್ಯಬ್ಧಿಯ ಶುಭಾಶಯಗಳು




**ಶ್ರೀ ಅನಂತ ಪದ್ಮನಾಭ ಕೊಠಾರಿ – ಶ್ರೀಮತಿ ಗೀತಾ**

ಪೆರ್ಡೂರು

ಶ್ರೀ ಅನಂತ ಪದ್ಮನಾಭ ಕೊಠಾರಿಯವರು 60 ಸಂವತ್ಸರಗಳನ್ನು ಪೂರ್ತಿಗೊಳಿಸಿ ಪೆರ್ಡೂರಿನ ಶ್ರೀ ಅನಂತಪದ್ಮನಾಭ ದೇವಸ್ಥಾನದಲ್ಲಿ ತಾ.13–12–2019ರಂದು ಧಾರ್ಮಿಕ ಪೂಜೆ ಹಾಗೂ ಹೋಮ ಹವನಗಳನ್ನು ನೆರವೇರಿಸಿ ಪಾವನಗೊಂಡಿದ್ದಾರೆ. ಈ ದಂಪತಿಗಳಿಗೆ ಶ್ರೀ ಅನಂತ ಪದ್ಮನಾಭ ದೇವರು ಆಯುರಾರೋಗ್ಯಾದಿ ಸಕಲ ಸೌಭಾಗ್ಯಗಳನ್ನು ಕರುಣಿಸಲೆಂದು ಪ್ರಾರ್ಥಿಸುವ,

ಮಕ್ಕಳು ಹಾಗೂ ಬಂಧುಮಿತ್ರರು

## ವೈವಾಹಿಕ ಜೀವನದ ಸುವರ್ಣ ಮಹೋತ್ಸವದ ಶುಭಾಶಯಗಳು



**ಶ್ರೀ ಶಶಿಕಾಂತ ರಾವ್ ಕೆ. – ಶ್ರೀಮತಿ ಸವಿತಾ ಎಸ್. ರಾವ್**

ಉರ್ವ, ಮಂಗಳೂರು

ದಾಂಪತ್ಯ ಜೀವನದ 50 ಸಂವತ್ಸರಗಳನ್ನು ಬಾಳಿ ಬೆಳಗಿದ ನಿಮಗೆ ಶುಭಾಶಯಗಳು. ಒಲುಮೆ ತುಂಬಿದ ತಮ್ಮ ಬದುಕು ನಮಗೆ ಸದಾ ದಾರಿದೀಪವಾಗಲಿ ಎಂದು ಆಶಿಸುತ್ತಾ ತಮ್ಮ ಆಶೀರ್ವಾದ, ಮಾರ್ಗದರ್ಶನ ಸದಾ ನಮಗಿರಲಿ ಎಂದು ಪ್ರಾರ್ಥಿಸುವ,

ಅಶೋಕ್ ರಾವ್ ಮತ್ತು ಫ್ಯಾಮಿಲಿ
ಹೇಮಚಂದ್ರ ರಾವ್ ಮತ್ತು ಫ್ಯಾಮಿಲಿ
ಶಿವರಾಮ ರಾವ್ ಮತ್ತು ಫ್ಯಾಮಿಲಿ
ರಾಜೇಂದ್ರಕುಮಾರ ರಾವ್ ಮತ್ತು ಫ್ಯಾಮಿಲಿ
ಸಹೋದರಿಯರು, ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬಸ್ಥರು


With Best Compliments From :

*****Rajathadri Hotel Pvt. Ltd.**

Lodging & Boarding

Sri Ramesh Shanubhag, Usha, Sanketh and Kavitha

Directors




OUR FACILITIES

★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com




ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ


| ಹೋಟೇಲ್ ವೃಂದಾವನ<br>ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್<br>ಪಡುಬಿದ್ರಿ | ವಿಶ್ವ ಟ್ರಾನ್ಸ್‌ಪೋರ್ಟ್<br>ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್<br>ಶ್ರೀ ಧವಳ ಎಲ್ಲೂರು |
|---|---|---|---|

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ





ಸಭಾಕಾರ್ಯಕ್ರಮದಲ್ಲಿ ಮಹಿಳೆಯರು



ಕುಂಭಾಭಿಷೇಕಕ್ಕಾಗಿ ಸಜ್ಜುಗೊಂಡ ಶ್ರೀ ಶಾರದಾ ದೇವಸ್ಥಾನ



ಸಭಾಕಾರ್ಯಕ್ರಮದಲ್ಲಿ ಪುರುಷರು




ಶ್ರೀಶ್ರೀಗಳವರ ಮೆರವಣಿಗೆ



ಶ್ರೀಶ್ರೀಗಳವರಿಂದ ಅನುಗ್ರಹ ಭಾಷಣ



ಶ್ರೀಶ್ರೀಗಳವರ ಮೆರವಣಿಗೆ



ಕುಂಭಾಭಿಷೇಕದ ಪ್ರಧಾನ ಕುಂಭವನ್ನು ದೇವಸ್ಥಾನಕ್ಕೆ ತರುತ್ತಿರುವುದು



ಕುಂಭಾಭಿಷೇಕದ ಬೆಳ್ಳಿಯ ಕಲಶಗಳು



ಶ್ರೀಶ್ರೀಗಳವರಿಗೆ ಧೂಳಿಪಾದ ಪೂಜೆ



ಪದ್ಮಶ್ರೀ ಗೌರೀಶಂಕರ್‌ರವರಿಗೆ ಸನ್ಮಾನ



ತಾ.05-03-2020ರಂದು ಸ್ವಾಗತ ಭಾಷಣ



ತಾ.06-03-2020ರಂದು ಸ್ವಾಗತ ಭಾಷಣ



ತಾ.06-03-2020ರಂದು ಧನ್ಯವಾದ ಸಮರ್ಪಣೆ

## ಶ್ರೀಮತಿ ರಮ್ಯ ಕೆ.ಆರ್.ರವರಿಗೆ ಡಾಕ್ಟರೇಟ್ ಪದವಿ



ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಗಂಗೋತ್ರಿಯಲ್ಲಿ ವಾಣಿಜ್ಯಶಾಸ್ತ್ರ ಉಪನ್ಯಾಸಕಿಯಾಗಿರುವ ಶ್ರೀಮತಿ ರಮ್ಯ ಕೆ. ಆರ್.ರವರು ಮಂಡಿಸಿದ ಅಧ್ಯಯನ ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯ ಡಾಕ್ಟರೇಟ್ ಪದವಿ ನೀಡಿದೆ. ಶ್ರೀಮತಿ ರಮ್ಯ ಕೆ. ಆರ್.ರವರು ಡಾ। ರಘುರಾಮರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ "ಎಪ್ಲೋಯೀರಿಟೆನ್ಶನ್ ಮ್ಯಾನೆಜ್ಮೆಂಟ್ ಪ್ರ್ಯಾಕ್ಟೀಸ್ ಇನ್ ಕಮರ್ಷಿಯಲ್ ಬ್ಯಾಂಕ್ಸ್ ಎ ಕಂಪರೇಟೀವ್ ಸ್ಟಡೀಸ್ ಆಫ್ ಸೆಲೆಕ್ಟೆಡ್ ಬ್ಯಾಂಕ್ಸ್ ಇನ್ ದಕ್ಷಿಣ ಕನ್ನಡ ಆಂಡ್ ಉಡುಪಿ ಡಿಸ್ಟ್ರಿಕ್ಟ್" ಎಂಬ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ನೀಡಿದ್ದು, ಇದೇ ಫೆಬ್ರವರಿ 27ರಂದು ನಡೆದ ಮಂಗಳೂರು ವಿಶ್ವವಿದ್ಯಾನಿಲಯದ 38ನೇ ಘಟಿಕೋತ್ಸವದಲ್ಲಿ ವಿ.ವಿ ಕುಲಪತಿ ಡಾ. ಯಡಪಡಿತ್ತಾಯರಿಂದ ಪದವಿಯನ್ನು ಸ್ವೀಕರಿಸಿದರು. "ಶ್ರೀಮತಿ ರಮ್ಯ ಕೆ. ಆರ್.ರವರು ಮೂಡು ಅಲೆವೂರಿನ ಉದ್ಯಮಿ ಲವ ಮೋಹನ್ ರಾವ್‌ರವರ ಪತ್ನಿ.

## ಶ್ರೀಮತಿ ರಮ್ಯ ಹೆಬ್ಬಾರ್‌ರವರಿಗೆ ಪಿ.ಎಚ್.ಡಿ. ಪದವಿ



ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಶ್ರೀಮತಿ ರಮ್ಯ ಹೆಬ್ಬಾರ್ ಅವರು ತಯಾರಿಸಿ ಸಲ್ಲಿಸಿರುವ "ರೇಡಿಯೋ ಗ್ರೇಸ್‌ಫುಲ್ ಗ್ರಾಫ್ಸ್ ಆಂಡ್ ದೆಯರ್ ನೈಸ್ ಕ್ಯಾರಕ್ಟರೈಸೇಶನ್" ಎಂಬ ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಪದವಿಯನ್ನು ಪಡೆದಿರುತ್ತಾರೆ.

ಇವರು ಈ ಸಂಶೋಧನೆಯನ್ನು ಡಾ॥ ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದ ಗಣಿತಜ್ಞ ಹಾಗೂ ಪ್ರಾಧ್ಯಾಪಕರಾಗಿರುವ ಕೊಕ್ಕಡ ಮೂಲದ ಡಾ॥ ಬಿ. ಸೂರ್ಯನಾರಾಯಣ ಅವರ ಮಾರ್ಗದರ್ಶನದಲ್ಲಿ ನಡೆಸಿರುತ್ತಾರೆ. ಸಂಪರ್ಕ ಕ್ಷೇತ್ರದ ದುಬಾರಿ ವೆಚ್ಚವನ್ನು ಕಡಿತಗೊಳಿಸುವ ಸಲುವಾಗಿ ವಿಷಯಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಇವರು ಹೆಬ್ರಿ ತಾಲೂಕಿನ ಕಬ್ಬಿನಾಲೆ ಮೂಲದ ಸೂರ್ಯನಾರಾಯಣ ಹೆಬ್ಬಾರ್‌ರ ಧರ್ಮಪತ್ನಿ ಹಾಗೂ ಬೆಳ್ತಂಗಡಿಯ ಬಿ.ಪಿ. ಅಶೋಕ್ ಕುಮಾರ್ (ಬಿ.ಎಸ್.ಎನ್.ಎಲ್.) ಮತ್ತು ಪದ್ಮಿನಿ ದಂಪತಿಗಳ ಸುಪುತ್ರಿಯಾಗಿದ್ದಾರೆ.

# ಶ್ರೀ ಶಾರದಾ ಮಂಟಪದಲ್ಲಿ ಶಿವರಾತ್ರಿಯ ಸಂಭ್ರಮ


ಪಡುಬಿದ್ರಿ ಸಂಘದ ಮಹಿಳಾ ಸದಸ್ಯೆಯರಿಂದ ಭಜನೆ


ಉಡುಪಿ ಸಂಘದ ಮಹಿಳಾ ಸದಸ್ಯೆಯರಿಂದ ಭಜನೆ

ತಾ.21–02–2020ರ ಶುಕ್ರವಾರದಂದು ಶಿವರಾತ್ರಿಯನ್ನು ವಿಶೇಷವಾಗಿ ಶ್ರೀ ಶಾರದಾ ಮಂಟಪದಲ್ಲಿ ಆಚರಿಸಲಾಯಿತು. ಅಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರಾರ್ಥನೆಯೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾದವು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಗಳಾದ ಶ್ರೀ ಯು. ಅರವಿಂದ ಕುಮಾರ್, ಕೋಶಾಧಿಕಾರಿ ಶ್ರೀ ಬಿ. ಜಯರಾಮರಾವ್ ಹಾಗೂ ಇತರ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಬ್ರಹ್ಮಶ್ರೀ ಸುಬ್ರಹ್ಮಣ್ಯ ಉಪಾಧ್ಯಾಯರು ರುದ್ರಾಭಿಷೇಕವನ್ನು ವಿಧಿಯುಕ್ತವಾಗಿ ನೆರವೇರಿಸಿದರು. ಸ್ವಾಧ್ಯಾಯ ತಂಡದವರಿಂದ ಪಾರಾಯಣ ನೆರವೇರಿತು. ಸುಮಾರು ಹತ್ತುಗಂಟೆಗೆ ಮುಖ್ಯಸಭಾಭವನದಲ್ಲಿ ಉಡುಪಿ ಶ್ರೀ ಶಾರದಾ ಭಜನಾ ತಂಡ ಹಾಗೂ ಪಡುಬಿದ್ರೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾದ ಮಹಿಳಾ ಸದಸ್ಯೆಯರಿಂದ ಶಿವಭಕ್ತಿ ಗೀತೆಗಳ ಭಜನಾ ಕಾರ್ಯಕ್ರಮ ನೆರವೇರಿತು. ಶ್ರೀಮತಿ ಯಶೋದಾ ಕೋಲ್ಪೆಯವರು ಹಾರ್ಮೋನಿಯಂನಲ್ಲಿ ಸಾಥ್ ನೀಡಿದರು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಶ್ರೀ ಕೆ. ಸುಧಾಕರ ರಾವ್ ಮತ್ತು ಡಾ.ವಿದ್ಯಾ ಎಸ್.ರಾವ್ ಹಾಗೂ ಮಹಿಳಾ ವೇದಿಕೆಯವರು ಭಜನಾ ತಂಡದ ಸದಸ್ಯೆಯರಿಗೆ ಶಾಲುಹೊದಿಸಿ ಸ್ಮರಣಿಕೆ ಹಾಗೂ ಕಿರುಕಾಣಿಕೆಯಿತ್ತು ಸನ್ಮಾನಿಸಿದರು. ನಂತರ ಮಹಿಳಾ ವೇದಿಕೆಯ ಸದಸ್ಯೆಯರಿಂದ ನೃತ್ಯರೂಪಕ ಪ್ರದರ್ಶನಗೊಂಡಿತು. ಕೊನೆಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಪೂಜೆ ನೆರವೇರಿತು. ಮಧ್ಯಾಹ್ನದ ಫಲಾಹಾರ ಪ್ರಸಾದದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.


ಸಂಘದ ಮಹಿಳಾ ಸದಸ್ಯೆಯರಿಂದ ನೃತ್ಯರೂಪಕ


With Best Compliments from :



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |


ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)







With Best Compliments From :




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org